# ಇ-ಕೋರ್ಟ್ಸ್ ಸೇವೆಗಳ

## ಮೊಬೈಲ್ ಅಪ್ಲಿಕೇಶನ್




GET IT ON Google Play

Download on the App Store


**ಪ್ರಸಾರ**

ಇ-ಸಮಿತಿ,

ಭಾರತದ ಸರ್ವೋಚ್ಚ ನ್ಯಾಯಾಲಯ

# ಇ-ಕೋರ್ಟ್ಸ್ ಸೇವೆಗಳ

# ಮೊಬೈಲ್ ಅಪ್ಲಿಕೇಶನ್




ಪ್ರಸಾರ

ಇ-ಸಮಿತಿ,

ಭಾರತದ ಸರ್ವೋಚ್ಚ ನ್ಯಾಯಾಲಯ

# ಇ-ಕೋರ್ಟ್ಸ್ ಸೇವೆಗಳ - ಮೊಬೈಲ್ ಅಪ್ಲಿಕೇಶನ್

**ಪ್ರಸಾರ**
**ಇ-ಸಮಿತಿ, ಭಾರತದ ಸರ್ವೋಚ್ಚ ನ್ಯಾಯಾಲಯ.**

ರಚನೆ,
ಆರ್. ಅರುಳ್ ಮೋಳಿ ಸೆಲ್ವಿ,
ಸದಸ್ಯ, (ಮಾನವ ಸಂಪನ್ಮೂಲ),
ಇ-ಸಮಿತಿ, ಭಾರತದ ಸರ್ವೋಚ್ಚ ನ್ಯಾಯಾಲಯ.

ಇವರಿಂದ ಕನ್ನಡ ಭಾಷೆಯಲ್ಲಿ ಅನುವಾದಿಸಲಾಗಿದೆ.

ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು :

- ಶಾಂತವೀರ ಶಿವಪ್ಪ
- ಬಿ. ಜಯಂತ ಕುಮಾರ್
- ಹೆಚ್.ಆರ್. ರಾಧಾ
- ಕೆ.ಎಲ್. ಅಶೋಕ
- ಅಭಯ ಡಿ. ಚೌಗಲಾ
- ಮಲ್ಲಿಕಾರ್ಜುನ
- ಸುನೀಲ್ ಎ. ಶೆಟ್ಟರ್
- ಚಂದ್ರಶೇಖರ್ ಯು.
- ದಿನೇಶ್ ಎನ್.ಜಿ.
- ಕೃಷ್ಣಮೂರ್ತಿ. ಪಡಸಲಗಿ
- ಗುರುರಾಜ.ಜಿ. ಶಿರೋಳ

ಹಿರಿಯ ಸಿವಿಲ್ ನ್ಯಾಯಾಧೀಶರು :

- ಸೋಮಶೇಖರ ಎ.
- ಶರಣಬಸಪ್ಪ ಬಿ. ಕೆಂಭಾವಿ
- ಭಟ್ ಮಂಜುನಾಥ ನಾರಾಯಣ
- ಕಾವೇರಿ
- ವಿದ್ಯಾ ಕೆ.
- ನಳಿನಿ ಕುಮಾರಿ ಎ.ಎಂ.
- ಉಂಡಿ ಮಂಜುಳ ಶಿವಪ್ಪ

ತಂತ್ರಾಂಶ ತಂತ್ರಜ್ಞರು :

- ಮಂಜುಳ ಎಂ.
- ಉಮಾದೇವಿ ಪಿ. ಗರಗ

ಪ್ರಥಮ ಆವೃತ್ತಿ : ಫೆಬ್ರುವರಿ, 2021.

**ಹಕ್ಕುತ್ಯಾಗ**

ಇ-ಸಮಿತಿಯಿಂದ ಪ್ರಸಾರ ಮಾಡಲಾದ ಈ ಉಲ್ಲೇಖಿತ ವಿಷಯವು ಕೇವಲ ಅಧ್ಯಯನ ಮತ್ತು ತರಬೇತಿ ಉದ್ದೇಶಕ್ಕಾಗಿ ಮಾತ್ರ. ಇಲ್ಲಿ ಬಳಸಿರುವ ಉಲ್ಲೇಖಗಳು ಕೇವಲ ಸೂಚಕಗಳಾಗಿವೆ ಹಾಗೂ ಯಾವುದೇ ಅಧಿಕೃತ ಅಥವಾ ನ್ಯಾಯಾಂಗ ಉಲ್ಲೇಖಕ್ಕಾಗಿ ಬಳಸಲಾಗುವುದಿಲ್ಲ.

॥ यतो धर्मस्ततो जयः ॥

DR JUSTICE D Y CHANDRACHUD
Judge, Supreme Court of India

## Foreword

The e-Committee of the Supreme Court has been at the forefront of introducing digital reforms in the field of law. In the past one year, the pandemic has also pushed advocates, judges and litigants to adopt high tech solutions due to the closure of offices and courts in light of lockdowns and public health concerns. Working remotely, virtual courts, digital workplaces and electronic case management have become integral to how the legal profession is practiced and conducted. This has given us a rare opportunity to embrace technology not just as an interim measure but to transform our legal system to make it more efficient, inclusive, accessible and environmentally sustainable. The e-Courts Services Mobile Application is a step in this direction.

The e-Courts Services Mobile Application is a one stop electronic case management tool (ECMT) for advocates and litigants for cases filed in the District Courts and High Courts. It provides complete case history from filing till disposal including date wise case diary. It allows users to access orders/judgments, cause list, transfer details of the case and interim application status. A unique feature of the application is that an advocate can maintain a digital diary of all cases under "My Cases" tab.

All these facilities are available free of cost. The usage of the application will not only reduce the footfall at the court complexes but will also save time and effort for judges, court staff and other stakeholders. It will also ensure that geographical

constraints do not hinder access to relevant case information. We have also attempted to make the application accessible to persons with disabilities.

The ECMT tools have been discussed in detail in the manual with screenshots. Keeping in mind the linguistic and cultural diversity of India, the manual has been translated in 11 regional languages.

The improvement in technological capacities must be accompanied by a change in culture and mindset. I am happy to note that many advocates and litigants have already embraced the services offered through this mobile application with more than 57 lakh downloads so far. The application will pave the way for optimizing our legal system in an ever-evolving digital world.

**[Dr Justice D Y Chandrachud]**

बरुण मित्रा, भा.प्र.से.
**BARUN MITRA, IAS**

सत्यमेव जयते

150 YEARS OF CELEBRATING THE MAHATMA

सचिव
न्याय विभाग
विधि और न्याय मंत्रालय
भारत सरकार
**SECRETARY**
**DEPARTMENT OF JUSTICE**
**MINISTRY OF LAW & JUSTICE**
**GOVERNMENT OF INDIA**

## FOREWORD

As the legal world is gradually turning digital globally, the process of ICT enablement of the judicial landscape in India has concurrently made significant strides. As an integral part of this multi-dimensional initiative, the eCourts Services Mobile App has been widely hailed as an effective Electronic Case Management Tool (ECMT). Its popularity is manifested in the growing number of downloads by lawyers, having already crossed the 57 lakh figure.

Robust Case Management and sound supporting systems are at the core of any well-functioning legal architecture. ECMT tool, enables a lawyer to efficiently manage case information, document assembly, calendaring, time-tracking of case status, accessing judicial decisions, compliance requirements etc. To cap it, ECMT is of immense convenience being available 24 x 7 with no geographical boundaries and easy access on no-cost basis. The eCourts Services Mobile App with its digital diary features has thus evolved into a must-have tool for lawyers to promotetheir professional efficiency.

Publication of this Manual on eCourts Services Mobile App is yet another laudable step by the eCommittee of the Supreme Court to create large scale awareness of this ECMT and in bringing its benefits to the doorstep of the lawyers' community. The manual is also available in Hindi and several other regional languages like Punjabi, Tamil, Gujarati, Odia and Nepali thus enhancing its outreach. I am confident that this Manual will be of great utility for the legal fraternity.

**25th February, 2021**
**New Delhi**

**(Barun Mitra)**

# “ಇ-ಕೋರ್ಟ್ಸ್ ಸೇವೆಗಳ” - ಮೊಬೈಲ್ ಅಪ್ಲಿಕೇಶನ್

## ಪರಿವಿಡಿ


1. “ಇ-ಕೋರ್ಟ್ಸ್ ಸೇವೆಗಳ” ಮೊಬೈಲ್ ಆ್ಯಪ್ ಅನ್ನು ಇನ್ಸ್ಟಾಲ್ ಮಾಡುವುದು ಹೇಗೆ: 4
1.1. ಇ-ಕೋರ್ಟ್ಸ್ ವೆಬ್‌ಸೈಟ್ https://ecourts.gov.in ಶಾರ್ಟ್‌ಕಟ್ ಲಿಂಕ್‌ನಿಂದ ಡೌನ್‌ಲೋಡ್ ಮಾಡುವುದು: 4
1.2. ಆಂಡ್ರಾಯ್ಡ್ ಮೊಬೈಲ್‌ನಲ್ಲಿ ಗೂಗಲ್ ಪ್ಲೇ ಸ್ಟೋರ್ ನಿಂದ ಡೌನ್ ಲೋಡ್ ಮಾಡುವುದು: 5
1.3. ಐಫೋನ್ / ಐಪ್ಯಾಡ್‌ಗಾಗಿ ಆಪಲ್ ಸ್ಟೋರ್‌ನಿಂದ ನೇರವಾಗಿ ಡೌನ್‌ಲೋಡ್ ಮಾಡುವುದು: 5
2. ಇ-ಕೋರ್ಟ್ಸ್ ಅಪ್ಲಿಕೇಶನ್ ಅನ್ನು ಕಾನ್ಫಿಗರ್ ಮಾಡುವುದು: 6
3. 6 ಭಾರತೀಯ ಭಾಷೆಗಳಲ್ಲಿ ಇ-ಕೋರ್ಟ್ಸ್ ಗಳ ಮೊಬೈಲ್ ಅಪ್ಲಿಕೇಶನ್ (ಶೀಘ್ರದಲ್ಲೇ ಬರಲಿದೆ): 7
4. ಇ-ಕೋರ್ಟ್ಸ್ ಮೊಬೈಲ್ ಅಪ್ಲಿಕೇಶನ್‌ನಲ್ಲಿ ತಿಳಿದಿರಬೇಕಾದ ಐಕಾನ್ ಗಳು: 8
4.1. ಇಕೋರ್ಟ್ಸ್ ಮೊಬೈಲ್ ಅಪ್ಲಿಕೇಶನ್‌ನ ಸ್ವಾಗತ ಪುಟ 8
4.2. ಮೆನು ಪಟ್ಟಿ ಐಕಾನ್‌ಗಳು : 8
4.3. ಜಿಲ್ಲಾ ನ್ಯಾಯಾಲಯ / ಹೈಕೋರ್ಟ್ ಪ್ರಕರಣದ ವಿವರಗಳು : 8
4.4. ಮುಖ್ಯ ಮೆನು ಆಯ್ಕೆಗಳು : 8
4.5. ಸಿಎನ್‌ಆರ್ ಹುಡುಕಾಟ : 8
4.6. ಪ್ರಕರಣದ ಸ್ಥಿತಿ ಹುಡುಕಾಟ : 9
4.7. ವ್ಯಾಜ್ಯ ಪಟ್ಟಿ : 9
4.8. ನನ್ನ ಪ್ರಕರಣಗಳು : 9
4.9. ನನ್ನ ಪ್ರಕರಣಗಳು - ದಿನಾಂಕ ಪ್ರಕಾರ / ಜಿಲ್ಲಾ ಪ್ರಕಾರ : 9
4.10. ಕ್ಯಾಲೆಂಡರ್ ಆಯ್ಕೆ : 9
4.11. ರಿಫ್ರೆಶ್ ಬಟನ್ : 9
4.12. ನನ್ನ ಪ್ರಕರಣಗಳ ಅಡಿಯಲ್ಲಿನ ಹುಡುಕಾಟ ಆಯ್ಕೆ : 10
4.13. ಕ್ಯೂ ಆರ್ ಕೋಡ್ : 10
4.14. ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ : 10
4.15. ಮಧ್ಯಂತರ ಅರ್ಜಿ ವಿವರಗಳು : 10
4.16. ವರ್ಗಾವಣೆ ವಿವರಗಳು : 10
4.17. ಅಧೀನ ನ್ಯಾಯಾಲಯಗಳ ವಿವರಗಳು : 11
4.18. ಪ್ರಕರಣದ ಇತಿಹಾಸ : 11
5. ಇ-ಕೋರ್ಟ್ಸ್ ಸೇವೆಗಳ ಮೊಬೈಲ್ ಅಪ್ಲಿಕೇಶನ್ ಮೂಲಕ ಪ್ರಕರಣದ ಸಂಪೂರ್ಣ ಇತಿಹಾಸವನ್ನು ಪಡೆಯಬಹುದು: 12
6. ಪ್ರಕರಣ ಹುಡುಕಾಟದಲ್ಲಿನ ಆಯ್ಕೆಗಳು: 13
7. ಸಿಎನ್‌ಆರ್ ಸಂಖ್ಯೆಯನ್ನು ಬಳಸಿಕೊಂಡು ಪ್ರಕರಣಗಳನ್ನು ಹುಡುಕುವುದು: 13
7.1. ಸಿಎನ್‌ಆರ್ ಸಂಖ್ಯೆ ಎಂದರೇನು? 13
7.2. ನಿಮ್ಮ ಸಿಎನ್‌ಆರ್ ಸಂಖ್ಯೆಯನ್ನು ಹೇಗೆ ತಿಳಿಯುವುದು : 14
7.3. ಇ-ಕೋರ್ಟ್ಸ್ ಮೊಬೈಲ್ ಆ್ಯಪ್ ನಿಂದ ಸಿಎನ್‌ಆರ್ ಸಂಖ್ಯೆಯನ್ನು ಪಡೆಯುವುದು ಹೇಗೆ: 14
7.4. ಸಿಎನ್‌ಆರ್ ಸಂಖ್ಯೆಯನ್ನು ಬಳಸಿಕೊಂಡು ಪ್ರಕರಣಗಳನ್ನು ಹುಡುಕುವುದು ಹೇಗೆ : 15
8. ವಿವಿಧ ಆಯ್ಕೆಗಳನ್ನು ಬಳಸಿ ಪ್ರಕರಣದ ಸ್ಥಿತಿಯನ್ನು ಹುಡುಕುವುದು : 16
8.1 ಪ್ರಕರಣ ಸಂಖ್ಯೆ ಆಯ್ಕೆಯನ್ನು ಬಳಸಿಕೊಂಡು ಪ್ರಕರಣದ ಸ್ಥಿತಿಯನ್ನು ವೀಕ್ಷಿಸುವುದು : 17
8.2 ಫೈಲಿಂಗ್ ಸಂಖ್ಯೆ ಆಯ್ಕೆಯನ್ನು ಬಳಸಿಕೊಂಡು ಪ್ರಕರಣದ ಸ್ಥಿತಿಯನ್ನು ವೀಕ್ಷಿಸುವುದು: 18
8.3 ಎಫ್‌ಐಆರ್ ಸಂಖ್ಯೆಯನ್ನು ಬಳಸಿ ಹುಡುಕುವುದು: 18
8.4 ವಕೀಲರು ಆಯ್ಕೆಯನ್ನು ಬಳಸಿಕೊಂಡು ಪ್ರಕರಣದ ಸ್ಥಿತಿಯನ್ನು ವೀಕ್ಷಿಸುವುದು: 19
8.4.1 ವಕೀಲರ ಹೆಸರಿನಿಂದ ಹುಡುಕುವುದು: 19

8.4.2. ಬಾರ್ ಕೋಡ್ ಬಳಸಿ ಹುಡುಕುವುದು :......20
8.4.3 ದಿನಾಂಕಾವಾರು ಪ್ರಕರಣಗಳ ಪಟ್ಟಿಯನ್ನು ಬಳಸಿ ಹುಡುಕುವುದು (ವಕೀಲರ ವ್ಯಾಜ್ಯ ಪಟ್ಟಿ):......21
8.5. ಪ್ರಕರಣ ಪ್ರಕಾರದ ಆಯ್ಕೆಯನ್ನು ಬಳಸಿಕೊಂಡು ಪ್ರಕರಣದ ಸ್ಥಿತಿಯನ್ನು ಪಡೆಯುವುದು: 22
8.6. ಪಕ್ಷಗಾರರ ಆಯ್ಕೆಯನ್ನು ಬಳಸಿಕೊಂಡು ಪ್ರಕರಣದ ಸ್ಥಿತಿಯನ್ನು ವೀಕ್ಷಿಸುವುದು: 23
8.7. ಕಾಯಿದೆ ಪ್ರಕಾರ ಹುಡುಕು : 23
8.8. ಕೇವಿಯಟ್: 24
8.9. ಪೂರ್ವಭಾವಿ ಅರ್ಜಿ ಸಂಖ್ಯೆಯ ಮೂಲಕ ಹುಡುಕುವುದು : 25
8.9.1. ಜಾಮೀನು ಸ್ಥಿತಿಯನ್ನು ಹೇಗೆ ತಿಳಿಯುವುದು:......25
8.9.2. ರಿಮಾಂಡ್ ಸ್ಥಿತಿಯನ್ನು ಹೇಗೆ ತಿಳಿಯುವುದು:......26
8.9.3. ಪೂರ್ವ ವಿಚಾರಣಾ ಅರ್ಜಿ ಸ್ಥಿತಿಯನ್ನು ಹೇಗೆ ತಿಳಿಯುವುದು:......27
9. ಇ-ಕೋರ್ಟ್ಸ್ ಗಳ ಮೊಬೈಲ್ ಆ್ಯಪ್ ಮೂಲಕ ವ್ಯಾಜ್ಯ ಪಟ್ಟಿ ಪಡೆಯುವುದು :......28
10. ನನ್ನ ಪ್ರಕರಣಗಳ ಆಯ್ಕೆ :......29
10.1. "ನನ್ನ ಪ್ರಕರಣಗಳಿಗೆ" ಪ್ರಕರಣಗಳನ್ನು ಹೇಗೆ ಸೇರಿಸಬಹುದು: 29
10.2. ನನ್ನ ಪ್ರಕರಣಗಳಿಂದ ಪ್ರಕರಣಗಳನ್ನು ಹೇಗೆ ತೆಗೆದುಹಾಕುವುದು : 30
10.3. ನನ್ನ ಪ್ರಕರಣಗಳಲ್ಲಿ ಹುಡುಕುವುದು : 30
10.4. ರಿಫ್ರೆಶ್ (ಮರುಚೇತರಿಸು) ಬಟನ್ : 30
10.5. ನನ್ನ ಪ್ರಕರಣಗಳು - ದಿನಾಂಕವಾರು / ಜಿಲ್ಲಾವಾರು ಪ್ರದರ್ಶನ ಆಯ್ಕೆ: 31
10.6. ಕ್ಯಾಲೆಂಡರ್: 32
11. ಬ್ಯಾಕಪ್ ಸೌಲಭ್ಯ......33
11.1 ರಫ್ತು ಆಯ್ಕೆ: 34
11.2. ಆಮದು ಆಯ್ಕೆ: 35
12. ಕ್ಯೂಆರ್ ಕೋಡ್ ಬಳಸಿ ಪ್ರಕರಣದ ಸ್ಥಿತಿಯನ್ನುಪಡೆಯುವುದು:......36
12.1. ಹಂತ 1: ನಿಮ್ಮ ಪ್ರಕರಣದ ಕ್ಯೂಆರ್ ಕೋಡ್ ಪಡೆಯುವುದು: 36
12.2. ಹಂತ 2: ಕ್ಯೂಆರ್ ಕೋಡ್ ಮುದ್ರಿಸಿ ಅದನ್ನು ಡಾಕೆಟ್ ನಲ್ಲಿ ಅಂಟಿಸುವುದು : 36
12.3. ಹಂತ 3: ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ : 36
13 ಇಂಟರ್ನೆಟ್ ಸೌಲಭ್ಯ ಇಲ್ಲದಿದ್ದಾಗ ಎಸ್.ಎಂ.ಎಸ್. ಮೂಲಕ ಪ್ರಕರಣದ ಸ್ಥಿತಿಯನ್ನು ಪಡೆಯುವುದು:......37
14. ಇ-ಕೋರ್ಟ್ಸ್ ಸ್ವಯಂ ಚಾಲಿತ ಇ-ಮೇಲ್ ಸೇವೆಯ ಮೂಲಕ ಪ್ರಕರಣದ ಸ್ಥಿತಿಯನ್ನು ಪಡೆಯುವುದು:......37
15. ನ್ಯಾಯಾಲಯ ಸಂಕೀರ್ಣ ಲೊಕೇಟರ್:......38
16. ಇ-ಕೋರ್ಟ್ಸ್ ಮೊಬೈಲ್ ಆಪ್ ಮೆನುವಿನಲ್ಲಿರುವ ವಿವಿಧ ಲಿಂಕ್‌ಗಳು:......38
17. ಇ-ಕೋರ್ಟ್ಸ್ ಮೊಬೈಲ್ ಆಪ್ ನಲ್ಲಿ ಇ-ಪೇ ಲಿಂಕ್:......39
18. ಇ-ಕೋರ್ಟ್ಸ್ ಮೊಬೈಲ್ ಆ್ಯಪ್ ನಲ್ಲಿ ಎನ್‌ಜೆಡಿಜಿ ಲಿಂಕ್:......39
19. ಇ-ಕೋರ್ಟ್ಸ್ ಮೊಬೈಲ್ ಆಪ್ ನ ಮೂಲಕ ಇಂಡಿಯಾ ಕೋಡ್ ಪ್ರವೇಶಿಸುವುದು:......40
19.1. ಇಂಡಿಯಾ ಕೋಡ್ ನಿಂದ ಬೇರ್ ಕಾಯಿದೆಗಳನ್ನು ಹುಡುಕುವುದು: 40
20. ಇ-ಕೋರ್ಟ್ಸ್ ಮೊಬೈಲ್ ಆಪ್ ನಲ್ಲಿ ಇ-ಫೈಲಿಂಗ್ ಲಿಂಕ್:......41
21. ಇ-ಕೋರ್ಟ್ಸ್ ಮೊಬೈಲ್ ಅಪ್ಲಿಕೇಶನ್‌ನಲ್ಲಿ ವರ್ಚುವಲ್ ಕೋರ್ಟ್‌ಗಳ ಲಿಂಕ್:......41
22. ಇ-ಕೋರ್ಟ್ಸ್ ಮೊಬೈಲ್ ಅಪ್ಲಿಕೇಶನ್‌ನಲ್ಲಿ ವಕೀಲರ ಫಾರ್ಮ್‌ಗಳು:......42
23. ಸಹಾಯ ಆಯ್ಕೆ :......43

# “ಇ-ಕೋರ್ಟ್ಸ್ ಸೇವೆಗಳ ”- ಮೊಬೈಲ್ ಅಪ್ಲಿಕೇಶನ್

ನಿಮ್ಮ ಎಲ್ಲಾ ಪ್ರಕರಣದ ಸ್ಥಿತಿಯು ನಿಮ್ಮ ಕೈಯಲ್ಲಿ 24 * 7 ಲಭ್ಯವಿದೆ ಎಂದು ನೀವು ಎಂದಾದರೂ ಕನಸು ಕಂಡಿದ್ದೀರಾ? ಇ-ಕೋರ್ಟ್ಸ್ ಸೇವೆಗಳ ಮೊಬೈಲ್ ಅಪ್ಲಿಕೇಶನೊಂದಿಗೆ ಕನಸು ನನಸಾಗಿದೆ. ಸಂಬಂಧಪಟ್ಟ ನ್ಯಾಯಾಲಯ ಸಂಕೀರ್ಣಕ್ಕೆ ಭೌತಿಕವಾಗಿ ಹೋಗದೆ ಈಗ ಯಾರು ಬೇಕಾದರೂ ತಮ್ಮ ಮೊಬೈಲ್ ಫೋನ್ ಮೂಲಕ ಪ್ರಕರಣದ ಸ್ಥಿತಿ, ನ್ಯಾಯಾಲಯದ ಆದೇಶಗಳು, ವ್ಯಾಜ್ಯ ಪಟ್ಟಿಯನ್ನು ವೀಕ್ಷಿಸಬಹುದು. ಇ-ಸಮಿತಿ, ಭಾರತದ ಮಾನ್ಯ ಸರ್ವೋಚ್ಚ ನ್ಯಾಯಾಲಯವು, ದಾವೆದಾರರು, ವಕೀಲರು, ಕಾನೂನು ಸಂಸ್ಥೆಗಳು, ಪೊಲೀಸ್, ಸರ್ಕಾರಿ ಏಜೆನ್ಸಿಗಳು ಮತ್ತು ಇತರ ಸಾಂಸ್ಥಿಕ ದಾವೆದಾರರ ಅನುಕೂಲಕ್ಕಾಗಿ “ಇ-ಕೋರ್ಟ್ಸ್ ಸರ್ವೀಸಸ್” ಹೆಸರಿನಲ್ಲಿ ಮೊಬೈಲ್ ಅಪ್ಲಿಕೇಶನ್ ಬಿಡುಗಡೆ ಮಾಡಿತು.

ಈ ಮೊಬೈಲ್ ಅಪ್ಲಿಕೇಶನ್ ಸಿಎನ್‌ಆರ್ ಸಂಖ್ಯೆ, ಪ್ರಕರಣದ ಸಂಖ್ಯೆ, ಫೈಲಿಂಗ್ ಸಂಖ್ಯೆ, ಪಕ್ಷಗಾರರ ಹೆಸರು, ಎಫ್‌ಐಆರ್ ಸಂಖ್ಯೆ, ವಕೀಲರ ವಿವರಗಳು, ಕಾಯಿದೆಗಳು, ಪ್ರಕರಣ ಪ್ರಕಾರವನ್ನು ಬಳಸಿಕೊಂಡು ಪ್ರಕರಣದ ಸ್ಥಿತಿಯನ್ನು  ಹುಡುಕುವ ಸೌಲಭ್ಯವನ್ನು ಒದಗಿಸುತ್ತದೆ. ಇ-ಕೋರ್ಟ್ಸ್ ಮೊಬೈಲ್ ಅಪ್ಲಿಕೇಶನ್ ಮೂಲಕ ನೀವು ಪ್ರಕರಣದ ಇತಿಹಾಸ, ಪ್ರಕರಣದ ಡೈರಿ, ವ್ಯಾಜ್ಯ ಪಟ್ಟಿ, ಪ್ರಕರಣದ ವರ್ಗಾವಣೆ ವಿವರಗಳು, ಆದೇಶ ಮತ್ತು ತೀರ್ಪನ್ನು ಸಹ ಉಚಿತವಾಗಿ ವೀಕ್ಷಿಸಬಹುದು.  ಆಂಡ್ರಾಯ್ಡ್ ಫೋನ್‌ಗಳಲ್ಲಿನ ಯಾವುದೇ ಅಪ್ಲಿಕೇಶನ್ ತರಹ ಇದನ್ನು ಗೂಗಲ್ ಪ್ಲೇ ಸ್ಟೋರ್‌ನಿಂದ ಡೌನ್‌ಲೋಡ್ ಮಾಡಬಹುದು ಮತ್ತು ಐಫೋನ್, ಐಪ್ಯಾಡ್ ಸಾಧನಗಳಿಗಾಗಿ ಆಪಲ್ ಆಪ್ ಸ್ಟೋರ್‌ನಿಂದ ಡೌನ್‌ಲೋಡ್ ಮಾಡಬಹುದು. ಅಧಿಕೃತ ಇ-ಸಮಿತಿ ವೆಬ್‌ಸೈಟ್ https://ecommitteesci.gov.in ನಲ್ಲಿ ಒದಗಿಸಲಾದ ಡೌನ್‌ಲೋಡ್ ಲಿಂಕ್‌ನಿಂದ ಸಹ ನೀವು ಡೌನ್‌ಲೋಡ್ ಮಾಡಬಹುದು.

ಇ-ಕೋರ್ಟ್ಸ್ ಮೊಬೈಲ್ ಅಪ್ಲಿಕೇಶನ್‌ನಲ್ಲಿ, ಇ-ಕೋರ್ಟ್ಸ್ ನ ಎಲ್ಲಾ ಸೇವೆಗಳ ಜೊತೆಗೆ ಒಂದು ಹೆಚ್ಚುವರಿ ಪ್ರಯೋಜನ ಲಭ್ಯವಿದೆ. ಇದರಲ್ಲಿ ಲಭ್ಯವಿರುವ 'ನನ್ನ ಪ್ರಕರಣಗಳು' ಆಯ್ಕೆಯನ್ನು ಬಳಸಿಕೊಂಡು ಕಸ್ಟಮೈಸ್ ಮಾಡಬಹುದು. ಇದು ವಕೀಲರ / ದಾವೆ ಹೂಡುವವರ ಡಿಜಿಟಲ್ ಡೈರಿಗೆ ಸಮಾನವಾಗಿರುತ್ತದೆ. ‘ನನ್ನ ಪ್ರಕರಣಗಳ’ ಅಡಿಯಲ್ಲಿ ತಮ್ಮ ವೈಯಕ್ತಿಕ ಪ್ರಕರಣಗಳ ಪಟ್ಟಿ ಮಾಡಬಹುದು ಹಾಗೂ ಪ್ರಸ್ತುತ ಮಾಹಿತಿ ಪಡೆಯಬಹುದು. ದಾವೆ ಹೂಡುವವರು, ಸಂಸ್ಥೆಗಳು, ಕಂಪನಿಗಳು ಅಥವಾ ವಿವಿಧ ಸ್ಥಳಗಳ ವಿವಿಧ ನ್ಯಾಯಾಲಯಗಳಲ್ಲಿ ಬಹುಸಂಖ್ಯೆ  ಪ್ರಕರಣಗಳನ್ನು ಹೊಂದಿರುವ ಸಂಸ್ಥೆಗೆ ಸಹ ಇದು ಉಪಯುಕ್ತವಾಗಿದೆ. ಇ-ಕೋರ್ಟ್ಸ್ ಸೇವೆಗಳ ಮೊಬೈಲ್ ಅಪ್ಲಿಕೇಶನ್, ವೈಯಕ್ತಿಕಗೊಳಿಸಿದ ಡಿಜಿಟಲ್ ಕೇಸ್ ಡೈರಿ ಮೂಲಕ ನಿಸ್ಸಂದೇಹವಾಗಿ ನಿಮ್ಮ ಎಲ್ಲಾ ಪ್ರಕರಣಗಳ ವಿವರಗಳು ನಿಮ್ಮ ಕೈಯಲ್ಲಿ (ಮೊಬೈಲ್ ) 24 * 7 ಉಚಿತವಾಗಿ ಲಭ್ಯವಿದೆ.

# 1. “ಇ-ಕೋರ್ಟ್ಸ್ ಸೇವೆಗಳ” ಮೊಬೈಲ್ ಆ್ಯಪ್ ಅನ್ನು ಇನ್ಸ್ಟಾಲ್ ಮಾಡುವುದು ಹೇಗೆ:

1.1. ಇ-ಕೋರ್ಟ್ಸ್ ವೆಬ್‌ಸೈಟ್ https://ecourts.gov.in ಶಾರ್ಟ್‌ಕಟ್ ಲಿಂಕ್‌ನಿಂದ ಡೌನ್‌ಲೋಡ್ ಮಾಡಿ.

1.2. ಆಂಡ್ರಾಯ್ಡ್ ಮೊಬೈಲ್‌ನಲ್ಲಿ ಗೂಗಲ್ ಪ್ಲೇ ನಿಂದ ಡೌನ್ ಲೋಡ್ ಮಾಡಿ.


## 1.1. ಇ-ಕೋರ್ಟ್ಸ್ ವೆಬ್‌ಸೈಟ್ https://ecourts.gov.in ಶಾರ್ಟ್‌ಕಟ್ ಲಿಂಕ್‌ನಿಂದ ಡೌನ್‌ಲೋಡ್ ಮಾಡುವುದು:

ಗೂಗಲ್ ಪ್ಲೇ ಸ್ಟೋರ್ / ಆಪಲ್ ಐಟ್ಯೂನ್ಸ್ ಸ್ಟೋರ್‌ಗಳಿಂದ ಹೊಸ ಇ-ಕೋರ್ಟ್ಸ್ ಮೊಬೈಲ್ ಅಪ್ಲಿಕೇಶನ್ ಅನ್ನು ಡೌನ್‌ಲೋಡ್ ಮಾಡಬಹುದು. ಇ-ಕೋರ್ಟ್ಸ್ ವೆಬ್‌ಸೈಟ್ ಗೂಗಲ್ ಪ್ಲೇ ಸ್ಟೋರ್ / ಆಪಲ್ ಐಟ್ಯೂನ್ಸ್‌ನಿಂದ ಇ-ಕೋರ್ಟ್ಸ್ ಸೇವೆಗಳ ಮೊಬೈಲ್ ಅಪ್ಲಿಕೇಶನ್ ಡೌನ್‌ಲೋಡ್ ಮಾಡಲು ಶಾರ್ಟ್‌ಕಟ್ ಲಿಂಕ್ ಅನ್ನು ಸಹ ಒದಗಿಸುತ್ತದೆ. ಈ ಶಾರ್ಟ್‌ಕಟ್ ಲಿಂಕ್ ಅನ್ನು ಕ್ಲಿಕ್ ಮಾಡಿದಾಗ, ನೀವು ಆಯಾ ಪ್ಲೇ ಸ್ಟೋರ್‌ಗಳಿಂದ ಡೌನ್‌ಲೋಡ್ ಮಾಡಬಹುದು. ಇ-ಕೋರ್ಟ್ಸ್ ಗಳ ವೆಬ್ ಪುಟದಲ್ಲಿ ಒದಗಿಸಲಾದ ಮೊಬೈಲ್ ಅಪ್ಲಿಕೇಶನ್ ಡೌನ್‌ಲೋಡ್ ಲಿಂಕ್ ಅನ್ನು ಇಲ್ಲಿ ಸ್ಕ್ರೀನ್‌ಶಾಟ್‌ನಂತೆ ತೋರಿಸಲಾಗಿದೆ. ಇನ್ಸ್ಟಾಲೇಶನ್ ಪೂರ್ಣಗೊಂಡ ನಂತರ "ಓಪನ್" ಬಟನ್ ಕ್ಲಿಕ್ ಮಾಡಿದಾಗ, ಈ ಕೆಳಗೆ ತೋರಿಸಿದಂತೆ ಅಪ್ಲಿಕೇಶನ್ ನ ಸ್ವಾಗತ ಪರದೆ ಕಾಣಿಸುತ್ತದೆ.




### 1.2. ಆಂಡ್ರಾಯ್ಡ್ ಮೊಬೈಲ್‌ನಲ್ಲಿ ಗೂಗಲ್ ಪ್ಲೇ ಸ್ಟೋರ್ ನಿಂದ ಡೌನ್ ಲೋಡ್ ಮಾಡುವುದು:


ನೀವು ಆಂಡ್ರಾಯ್ಡ್ ಸ್ಮಾರ್ಟ್‌ಫೋನ್ ಹೊಂದಿದ್ದರೆ, ಇ-ಕೋರ್ಟ್ಸ್ ಸೇವೆಗಳ ಮೊಬೈಲ್ ಅಪ್ಲಿಕೇಶನ್‌ಗಾಗಿ ಗೂಗಲ್ ಪ್ಲೇ ಸ್ಟೋರ್ ಗೆ ಹೋಗಿ "ಇ-ಕೋರ್ಟ್ಸ್ ಸರ್ವೀಸಸ್ ಮೊಬೈಲ್ ಆಪ್" ಎಂದು ಹುಡುಕಿ, ಡೌನ್‌ಲೋಡ್ ಕ್ಲಿಕ್ ಮಾಡಿ. ನಂತರ ಇನ್ಸ್ಟಾಲ್ ಬಟನ್ ಒತ್ತಿದಾಗ ಮೊಬೈಲ್ ಆಪ್ ಇನ್ಸ್ಟಾಲ್ ಆಗುತ್ತದೆ.




### 1.3. ಐಫೋನ್ / ಐಪ್ಯಾಡ್‌ಗಾಗಿ ಆಪಲ್ ಸ್ಟೋರ್‌ನಿಂದ ನೇರವಾಗಿ ಡೌನ್‌ಲೋಡ್ ಮಾಡುವುದು:

ನೀವು ಆಪಲ್ ಐಫೋನ್ ಹೊಂದಿದ್ದರೆ, "ಇ-ಕೋರ್ಟ್ಸ್ ಸರ್ವೀಸಸ್ ಮೊಬೈಲ್ ಅಪ್ಲಿಕೇಶನ್" ಗಾಗಿ ಆಪಲ್ ಸ್ಟೋರ್ ನಲ್ಲಿ ಹುಡುಕಿ ಮತ್ತು ಡೌನ್‌ಲೋಡ್ ಕ್ಲಿಕ್ ಮಾಡಿ. ಇನ್ಸ್ಟಾಲ್ ಬಟನ್ ಕ್ಲಿಕ್ ಮಾಡಿದ ನಂತರ ನಿಮ್ಮ ಆಪಲ್ ಐಫೋನ್‌ನಲ್ಲಿ ಮೊಬೈಲ್ ಅಪ್ಲಿಕೇಶನ್ ಇನ್ಸ್ಟಾಲ್ ಆಗುತ್ತದೆ. ಅಂತೆಯೇ, ಐಪ್ಯಾಡ್ ಗಾಗಿ ಇ-ಕೋರ್ಟ್ಸ್ ಸೇವೆಗಳ ಮೊಬೈಲ್ ಅಪ್ಲಿಕೇಶನ್ ಲಭ್ಯವಿದೆ. ಇದನ್ನು ಐಪ್ಯಾಡ್‌ನಲ್ಲಿ ಡೌನ್‌ಲೋಡ್ ಮಾಡಬಹುದು ಮತ್ತು ಇನ್ಸ್ಟಾಲ್ ಮಾಡಬಹುದು.




## 2. ಇ-ಕೋರ್ಟ್ಸ್ ಅಪ್ಲಿಕೇಶನ್ ಅನ್ನು ಕಾನ್ಫಿಗರ್ ಮಾಡುವುದು:

ಈಗಿನ ಪ್ರಸಕ್ತ ಇ-ಕೋರ್ಟ್ಸ್ ಸೇವೆಗಳ ಅಪ್ಲಿಕೇಶನ್, ಕೆಳಗೆ ಕಾಣಿಸಿದ ಮೂರು ವಿಭಾಗಗಳಲ್ಲಿ ಸೇವೆ ನೀಡುತ್ತದೆ;

**(a)** ಉಚ್ಚ ನ್ಯಾಯಾಲಯ

**(b)** ಜಿಲ್ಲಾ ನ್ಯಾಯಾಲಯ

**(c)** ಎರಡು




ಇ-ಕೋರ್ಟ್ಸ್ ಸೇವೆಗಳ ಮೊಬೈಲ್ ಅಪ್ಲಿಕೇಶನ್ ನಲ್ಲಿ ನೀವು ಉಚ್ಚ ನ್ಯಾಯಾಲಯ, ಜಿಲ್ಲಾ ನ್ಯಾಯಾಲಯ, ಹಾಗೂ ಎರಡೂ ನ್ಯಾಯಾಲಯಗಳ ಪ್ರಕರಣಗಳ ವಿವರಗಳನ್ನು ಪಡೆಯಲು ಸೂಕ್ತ ಆಯ್ಕೆ ಮಾಡಿಕೊಳ್ಳಬಹುದಾಗಿದೆ.

ಉಚ್ಚ ನ್ಯಾಯಾಲಯದ ಸೇವೆಗಳನ್ನು ಪಡೆಯಲು ಹೈಕೋರ್ಟ್ (ಉಚ್ಚ ನ್ಯಾಯಾಲಯ) ಎನ್ನುವ ದುಂಡು ಗುಂಡಿಯನ್ನು ಒತ್ತಬೇಕು. ಜಿಲ್ಲಾ ನ್ಯಾಯಾಲಯಗಳ ಸೇವೆಗಳನ್ನು ಜಿಲ್ಲಾ ನ್ಯಾಯಾಲಯ (ಡಿಸ್ಟ್ರಿಕ್ಟ್ ಕೋರ್ಟ್) ಎನ್ನುವ ದುಂಡು ಗುಂಡಿಯನ್ನು ಒತ್ತುವ ಮೂಲಕ ಪಡೆಯಬಹುದು. ಜಿಲ್ಲಾ ನ್ಯಾಯಾಲಯ ಹಾಗೂ ಉಚ್ಚ ನ್ಯಾಯಾಲಯ ಎರಡರ ಸೇವೆಗಳನ್ನು ಪಡೆಯಲು " ಎರಡೂ" (ಬೋಥ್) ಎನ್ನುವ ದುಂಡು ಗುಂಡಿಯನ್ನು ಒತ್ತಬೇಕಾಗುತ್ತದೆ.




## 3. 6 ಭಾರತೀಯ ಭಾಷೆಗಳಲ್ಲಿ ಇ-ಕೋರ್ಟ್ಸ್ ಗಳ ಮೊಬೈಲ್ ಅಪ್ಲಿಕೇಶನ್ (ಶೀಘ್ರದಲ್ಲೇ ಬರಲಿದೆ):

ಪರೀಕ್ಷೆಯಲ್ಲಿರುವ ಇ-ಕೋರ್ಟ್ಸ್ ಮೊಬೈಲ್ ಅಪ್ಲಿಕೇಶನ್‌ನ ಇತ್ತೀಚಿನ ಆವೃತ್ತಿಯು ಇಂಗ್ಲಿಷ್ ಮತ್ತು ಆರು ಪ್ರಾದೇಶಿಕ ಭಾಷೆಗಳಲ್ಲಿ ಲಭ್ಯವಾಗಲಿದೆ. ಸಾಮಾನ್ಯ ಬಳಕೆದಾರರ ಕುತೂಹಲವನ್ನು ಹೆಚ್ಚಿಸಲು ಆರು ಪ್ರಾದೇಶಿಕ ಭಾಷೆಗಳಲ್ಲಿ ಇ-ಕೋರ್ಟ್‌ಗಳ ಅಪ್ಲಿಕೇಶನ್‌ನ ಸ್ಕ್ರೀನ್‌ಶಾಟ್‌ಗಳನ್ನು ಇಲ್ಲಿ ಸೇರಿಸಲಾಗಿದೆ. ಹಿಂದಿ, ಮರಾಠಿ, ತಮಿಳು, ಕನ್ನಡ, ಗುಜರಾತಿ, ತೆಲುಗು

- ಹಿಂದಿ
- ಮರಾಠಿ
- ತಮಿಳು
- ಕನ್ನಡ
- ಗುಜರಾತಿ
- ತೆಲುಗು




## 4. ಇ-ಕೋರ್ಟ್ಸ್ ಮೊಬೈಲ್ ಅಪ್ಲಿಕೇಶನ್‌ನಲ್ಲಿ ತಿಳಿದಿರಬೇಕಾದ ಐಕಾನ್ ಗಳು:


| | |
|---|---|
| **4.1. ಇಕೋರ್ಟ್ಸ್ ಮೊಬೈಲ್ ಅಪ್ಲಿಕೇಶನ್‌ನ ಸ್ವಾಗತ ಪುಟ**<br><br>ಮೊಬೈಲ್ ಅಪ್ಲಿಕೇಶನ್‌ಗೆ ಪ್ರವೇಶಿಸಿದಾಗ ಈ ಸ್ವಾಗತ ಪುಟವನ್ನು ಪ್ರದರ್ಶಿಸಲಾಗುತ್ತದೆ. |  |
| **4.2. ಮೆನು ಪಟ್ಟಿ ಐಕಾನ್‌ಗಳು :** <br><br>ತೋರಿಸಿದ ಮೂರು-ಸಾಲಿನ ಐಕಾನ್ ಅನ್ನು ನೀವು ಕ್ಲಿಕ್ ಮಾಡಿದಾಗ, ಇಕೋರ್ಟ್ಸ್ ಮೊಬೈಲ್ ಅಪ್ಲಿಕೇಶನ್‌ನ ಸಂಪೂರ್ಣ ಮೆನು ಪಟ್ಟಿಯನ್ನು ತೋರಿಸುತ್ತದೆ. |  |
| **4.3. ಜಿಲ್ಲಾ ನ್ಯಾಯಾಲಯ / ಹೈಕೋರ್ಟ್ ಪ್ರಕರಣದ ವಿವರಗಳು :**<br><br>ನೀವು ಜಿಲ್ಲಾ ನ್ಯಾಯಾಲಯ / ಹೈಕೋರ್ಟ್ / ಜಿಲ್ಲಾ ನ್ಯಾಯಾಲಯ ಮತ್ತು ಹೈಕೋರ್ಟ್ ಎರಡಕ್ಕೂ ಮೊಬೈಲ್ ಅಪ್ಲಿಕೇಶನ್ ಅನ್ನು ಕಾನ್ಫಿಗರ್ ಮಾಡಬಹುದು. |  |
| **4.4. ಮುಖ್ಯ ಮೆನು ಆಯ್ಕೆಗಳು :**<br><br>i. ಸಿಎನ್‌ಆರ್ ಹುಡುಕಾಟ ;<br>ii ಪ್ರಕರಣದ ಸ್ಥಿತಿ ;<br>iii. ವ್ಯಾಜ್ಯ ಪಟ್ಟಿ ;<br>iv. ನನ್ನ ಪ್ರಕರಣಗಳ ಆಯ್ಕೆ ; |  |
| **4.5. ಸಿಎನ್‌ಆರ್ ಹುಡುಕಾಟ :**<br><br>ಸಿಎನ್‌ಆರ್ ಐಕಾನ್ ಬಳಸಿ, ನೀವು ಸಿಎನ್‌ಆರ್ ಸಂಖ್ಯೆಯ ಮೂಲಕ ಪ್ರಕರಣದ ಸ್ಥಿತಿಯನ್ನು ಹುಡುಕಬಹುದು. |  |

### 4.6. ಪ್ರಕರಣದ ಸ್ಥಿತಿ ಹುಡುಕಾಟ :

ಪ್ರಕರಣದ ಸ್ಥಿತಿ ಆಯ್ಕೆಯನ್ನು ಬಳಸುವುದರಿಂದ ಈ ಕೆಳಗಿನ ಒಂಬತ್ತು ಹುಡುಕಾಟ ಆಯ್ಕೆಗಳನ್ನು ಬಳಸಿಕೊಂಡು ಪ್ರಕರಣದ ಸ್ಥಿತಿಯನ್ನು ಅನ್ವೇಷಿಸಬಹುದು.


| | |
|---|---|
| ಪ್ರಕರಣ ಸಂಖ್ಯೆ | ಕಕ್ಷಿದಾರನ ಹೆಸರು |
| ದಾಖಲಾತಿ ಸಂಖ್ಯೆ | ಎಫ್ಐಆರ್ |
| ವಕೀಲರು | ಕಾಯಿದೆಗಳು |
| ಪ್ರಕರಣ ಪ್ರಕಾರ | ಕೇವಿಯಟ್ |
| ಪೂರ್ವಭಾವಿ ಅರ್ಜಿ | |





### 4.7. ವ್ಯಾಜ್ಯ ಪಟ್ಟಿ :

ಈ ಐಕಾನ್ ಬಳಸಿ, ಯಾವುದೇ ನ್ಯಾಯಾಲಯದ ವ್ಯಾಜ್ಯ ಪಟ್ಟಿಯನ್ನು ವೀಕ್ಷಿಸಬಹುದು.




### 4.8. ನನ್ನ ಪ್ರಕರಣಗಳು :

ಈ "ನನ್ನ ಪ್ರಕರಣಗಳು" ಆಯ್ಕೆಯ ಅಡಿಯಲ್ಲಿ ನಿಮ್ಮ ವೈಯಕ್ತಿಕಗೊಳಿಸಿದ ಪ್ರಕರಣಗಳ ಪಟ್ಟಿಯನ್ನು ನೀವು ಉಳಿಸಬಹುದು.




### 4.9. ನನ್ನ ಪ್ರಕರಣಗಳು - ದಿನಾಂಕ ಪ್ರಕಾರ / ಜಿಲ್ಲಾ ಪ್ರಕಾರ :

ನನ್ನ ಪ್ರಕರಣಗಳನ್ನು ದಿನಾಂಕದ ಪ್ರಕಾರ / ಜಿಲ್ಲಾವಾರು ಎರಡು ವಿಧಾನಗಳಲ್ಲಿ ಪ್ರದರ್ಶಿಸಲಾಗುತ್ತದೆ. ನಿಮಗೆ ಬೇಕಾದ ಪ್ರದರ್ಶನ ವಿಧಾನವನ್ನು ನೀವು ಆಯ್ಕೆ ಮಾಡಬಹುದು.




### 4.10. ಕ್ಯಾಲೆಂಡರ್ ಆಯ್ಕೆ :

ಕ್ಯಾಲೆಂಡರ್ ಆಯ್ಕೆಯು ಪ್ರಕರಣಗಳನ್ನು ಕ್ಯಾಲೆಂಡರ್ ಸ್ವರೂಪದಲ್ಲಿ ಪ್ರದರ್ಶಿಸುತ್ತದೆ.




### 4.11. ರಿಫ್ರೆಶ್ ಬಟನ್ :

ಈ ಐಕಾನ್ ಕ್ಲಿಕ್ ಮಾಡಿದಾಗ ಡೇಟಾವನ್ನು ನವೀಕರಿಸುತ್ತದೆ.



**4.12. ನನ್ನ ಪ್ರಕರಣಗಳ ಅಡಿಯಲ್ಲಿನ ಹುಡುಕಾಟ ಆಯ್ಕೆ :**

ನನ್ನ ಪ್ರಕರಣಗಳ ಅಡಿಯಲ್ಲಿರುವ ಹುಡುಕಾಟ ಆಯ್ಕೆ, ನಿಮ್ಮ ವೈಯಕ್ತಿಕಗೊಳಿಸಿದ ಪ್ರಕರಣಗಳ ಪಟ್ಟಿಯಿಂದ ಪ್ರಕರಣಗಳನ್ನು ಹುಡುಕಲು ಸಹಾಯ ಮಾಡುತ್ತದೆ.




**4.13. ಕ್ಯೂ ಆರ್ ಕೋಡ್ :**

ಪ್ರಕರಣ ಇತಿಹಾಸದ ಅಡಿಯಲ್ಲಿ ಪ್ರತಿ ಪ್ರಕರಣಕ್ಕೂ ಒಂದು ನಿರ್ದಿಷ್ಟವಾದ ಕ್ಯೂಆರ್ ಕೋಡ್ ಲಭ್ಯವಿದೆ. ಈ ಕ್ಯೂಆರ್ ಕೋಡ್ ಅನ್ನು ಪ್ರಕರಣ ಕಡತದ ಮೇಲೆ ಅಂಟಿಸಬಹುದು.





**4.14. ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ :**

ನಿರ್ದಿಷ್ಟ ಪ್ರಕರಣದ ಸ್ಥಿತಿಯನ್ನು ತಿಳಿಯಲು ಮೊಬೈಲ್ ಅಪ್ಲಿಕೇಶನ್‌ನಲ್ಲಿರುವ ಈ ಸ್ಕ್ಯಾನ್ ಕ್ಯೂಆರ್ ಕೋಡ್ ಆಯ್ಕೆಯನ್ನು ಬಳಸಿ ಸುಲಭವಾಗಿ ಸ್ಕ್ಯಾನ್ ಮಾಡಬಹುದು.




**4.15. ಮಧ್ಯಂತರ ಅರ್ಜಿ ವಿವರಗಳು :**

ಪ್ರಕರಣದ ಇತಿಹಾಸ ಅಡಿಯಲ್ಲಿ, ಸಂಬಂಧಪಟ್ಟ ನ್ಯಾಯಾಲಯವು ನಮೂದಿಸಿದ ಮಧ್ಯಂತರ ಅರ್ಜಿ ವಿವರಗಳನ್ನು ಪಡೆಯಬಹುದು.


IA Details

| IA Number | Party | Date of Filing | Next Date | IA Status |
|---|---|---|---|---|
| IA/1/2019 | XXXXXXX XXXXXXX | 24-01-2019 | 28-05-2020 | Pending |

**4.16. ವರ್ಗಾವಣೆ ವಿವರಗಳು :**

ಮೊಬೈಲ್ ಆ್ಯಪ್ ಮೂಲಕ ಪ್ರಕರಣವು ಒಂದು ನ್ಯಾಯಾಲಯದಿಂದ ಮತ್ತೊಂದು ನ್ಯಾಯಾಲಯಕ್ಕೆ ವರ್ಗಾವಣೆಯಾದ ವಿವರಗಳನ್ನು ಪಡೆಯಬಹುದು.



Case Transfer Details Between The Courts

| Transfer Date | From Court No. and Judge | To Court No. and Judge |
|---|---|---|
| 17-07-2018 | 15 - District Judge-13 and Addl Sessions Judge Abad | 21 - Adhoc District Judge-5 Asst Sessions Judge Abad |

**4.17. ಅಧೀನ ನ್ಯಾಯಾಲಯಗಳ ವಿವರಗಳು :**

ಮೇಲ್ಮನವಿ ಪ್ರಕರಣದಲ್ಲಿ, ಅಧೀನ ನ್ಯಾಯಾಲಯದ ಮಾಹಿತಿ ಲಭ್ಯವಿದೆ.





**4.18. ಪ್ರಕರಣದ ಇತಿಹಾಸ :**

ಪ್ರಕರಣದ ಇತಿಹಾಸದಲ್ಲಿ, ಈ ಕೆಳಗಿನವುಗಳ ಅಡಿಯಲ್ಲಿ ಒಂದು ಪ್ರಕರಣದ ಸಂಪೂರ್ಣ ವಿವರಗಳನ್ನು ಪಡೆಯಬಹುದು

- ಪ್ರಕರಣದ ವಿವರಗಳು
- ಪ್ರಕರಣದ ಸ್ಥಿತಿ
- ಕ್ಯೂಆರ್ ಕೋಡ್
- ಅರ್ಜಿದಾರ ಮತ್ತು ವಕೀಲರು
- ಪ್ರತಿವಾದಿ ಮತ್ತು ವಕೀಲರು
- ಕಾಯಿದೆಗಳು
- ಪ್ರಕರಣದ ವಿಚಾರಣೆಯ ಇತಿಹಾಸ
- ಅಂತಿಮ ಆದೇಶ / ತೀರ್ಪುಗಳು



## 5. ಇ-ಕೋರ್ಟ್ಸ್ ಸೇವೆಗಳ ಮೊಬೈಲ್ ಅಪ್ಲಿಕೇಶನ್ ಮೂಲಕ ಪ್ರಕರಣದ ಸಂಪೂರ್ಣ ಇತಿಹಾಸವನ್ನು ಪಡೆಯಬಹುದು:



## 6. ಪ್ರಕರಣ ಹುಡುಕಾಟದಲ್ಲಿನ ಆಯ್ಕೆಗಳು:

ಇ-ಕೋರ್ಟ್ಸ್ ಮೊಬೈಲ್ ಆ್ಯಪ್ ಅಡಿಯಲ್ಲಿ ಎರಡು ಮುಖ್ಯವಾದ ಹುಡುಕಾಟ ಮೆನುಗಳಿವೆ.

(I) ಸಿಎನ್‌ಆರ್ ಹುಡುಕಾಟ; (ii ) ಪ್ರಕರಣದ ಸ್ಥಿತಿ(ಹುಡುಕಾಟ); ಇಲ್ಲಿ ಒಂದೊಂದಾಗಿ ನೋಡೋಣ.

## 7. ಸಿಎನ್‌ಆರ್ ಸಂಖ್ಯೆಯನ್ನು ಬಳಸಿಕೊಂಡು ಪ್ರಕರಣಗಳನ್ನು ಹುಡುಕುವುದು:




ಮೊಬೈಲ್ ಆ್ಯಪ್ ಬಳಸಿ ನಿಮ್ಮ ಫೋನ್‌ನಲ್ಲಿ ಪ್ರಕರಣದ ವಿವರಗಳನ್ನು ತ್ವರಿತವಾಗಿ ಪಡೆಯಲು ಸಿಎನ್‌ಆರ್ ಸಂಖ್ಯೆಯ ಮೂಲಕ ಹುಡುಕಿ. ಸಿಎನ್‌ಆರ್ ಸಂಖ್ಯೆ ಅಂದರೆ ಏನು ಎಂದು ತಿಳಿಯಲು ಬಯಸುವುದಾದರೆ, ಓದುವುದನ್ನು ಮುಂದುವರಿಸಿ.

### 7.1. ಸಿಎನ್‌ಆರ್ ಸಂಖ್ಯೆ ಎಂದರೇನು?

ಸಿಎನ್‌ಆರ್ ಸಂಖ್ಯೆ ಎಂದರೆ, ಕೇಸ್ ನಂಬರ್ ರೆಕಾರ್ಡ್. ಸಿಎನ್‌ಆರ್ ಸಂಖ್ಯೆಯು ಎಲ್ಲಾ ಪ್ರಕರಣಗಳಿಗೆ ನೀಡಲಾದ ಅನನ್ಯ 16 ಅಂಕಿಯ ಸಂಖ್ಯೆಯಾಗಿದೆ. ಸಂಕ್ಷಿಪ್ತವಾಗಿ ಹೇಳುವುದಾದರೆ, ಇದು ಯಾವುದೇ ಪ್ರಕರಣವನ್ನು ಗುರುತಿಸಬಹುದಾದ ವಿಶಿಷ್ಟ ಕೇಸ್ ಗುರುತಿನ ಸಂಖ್ಯೆ. ಸಿಐಎಸ್ ಅಪ್ಲಿಕೇಶನ್ ಮೂಲಕ ಸಲ್ಲಿಸಿದ ಪ್ರತಿಯೊಂದು ಪ್ರಕರಣಕ್ಕೂ ಸಿಎನ್‌ಆರ್ ಯನ್ನು ನಿಗದಿಪಡಿಸಲಾಗಿದೆ. ಇದು ರೈಲು ಟಿಕೆಟ್‌ಗಳಲ್ಲಿ ಬಳಸುವ ಪಿಎನ್‌ಆರ್ ಸಂಖ್ಯೆಯಂತೆಯೇ ಇದೆ. ಹೈಕೋರ್ಟ್ ಮತ್ತು ಜಿಲ್ಲಾ ನ್ಯಾಯಾಲಯದಲ್ಲಿ ಯಾರಾದರೂ ಸಿಎನ್‌ಆರ್ ಸಂಖ್ಯೆಯೊಂದಿಗೆ ಅವರ ಪ್ರಕರಣವನ್ನು ಪತ್ತೆಹಚ್ಚಬಹುದು.

| | |
|---|---|
| 16 ಅಂಕಿಯ ಸಿಎನ್‌ಆರ್ ಸಂಖ್ಯೆಯು ಈ ಕೆಳಗೆ ತೋರಿಸಿದ ಭಾಗಗಳನ್ನು ಒಳಗೊಂಡಿದೆ.<br>(ರಾಜ್ಯ ಕೋಡ್ )(ಜಿಲ್ಲಾ ಕೋಡ್ )(ನ್ಯಾಯಾಲಯ ಘಟಕ ಕೋಡ್ )(ಪ್ರಕರಣ ದಾಖಲಾತಿ ಸಂಖ್ಯೆ )(ದಾಖಲಾತಿ ವರ್ಷ ) | (KA) (BC) (01) (023357) (2020) |

ಸ್ಪಷ್ಟ ತಿಳುವಳಿಕೆಗಾಗಿ ವಿವಿಧ ರಾಜ್ಯಗಳ (ಪಂಜಾಬ್, ಮೇಘಾಲಯ, ತಮಿಳುನಾಡು) ಸಿಎನ್‌ಆರ್ ಸಂಖ್ಯೆಯ ಉದಾಹರಣೆಯನ್ನು ಇಲ್ಲಿ ನೀಡಲಾಗಿದೆ.

| CNR Number | PBJL01-015294-2016 | MLSH04-000548-2017 | TNSA06-000398-2017 |
|---|---|---|---|
| State code (2 digits) | PB<br>(Punjab) | ML<br>(Megalaya ) | TN<br>(Tamil Nadu) |
| District Code<br>(2 digits) | JL<br>(Jalandar) | SH<br>(East Khasi district) | SA<br>(Salem district) |
| Establishment Code<br>(2 digits) | (01)<br>(District and sessionscourt Establishment) | 04<br>(Chief Judicial Magistrate Establishment) | 05<br>(Principal District Munsif Establishment) |
| Case filing number<br>(6 digits) | 014824<br>(Case number) | 000548<br>(Case Number) | 000470<br>(Case Number) |
| Filing year (4 digits) | 2015 (Filing Year) | 2017 (Filing Year) | 2017 (Filing Year) |
| Total (16digit)<br>(State code)<br>(District code)<br>(Establishment code)<br>(Case filing number)<br>(Filing year) | (PB)(JL)(01)<br>(014824)(2015)<br>(Total 16 digits) | (ML)(SH)(04)<br>(000548)(2017)<br>(Total 16 digits) | (TN)(SA)(05)<br>(000470)(2017)<br>(Total 16 digits) |

## 7.2. ನಿಮ್ಮ ಸಿಎನ್‌ಆರ್ ಸಂಖ್ಯೆಯನ್ನು ಹೇಗೆ ತಿಳಿಯುವುದು :

ದಾವೆ ಹೂಡುವವರು / ವಕೀಲರು ಅಥವಾ ಯಾರಾದರೂ ಪ್ರತಿ ಪ್ರಕರಣದ ಸಿಎನ್‌ಆರ್ ಸಂಖ್ಯೆಯನ್ನು ಎರಡು ರೀತಿಯಲ್ಲಿ ಪಡೆಯಬಹುದು

(i) ಇ-ಕೋರ್ಟ್ಸ್ ಸೇವೆಗಳ ಮೊಬೈಲ್ ಆ್ಯಪ್ ನಿಂದ; (ii) ಇ-ಕೋರ್ಟ್ಸ್ ಸೇವೆಯ ವೆಬ್‌ಸೈಟ್ ಲಿಂಕ್‌ನಿಂದ;

## 7.3. ಇ-ಕೋರ್ಟ್ಸ್ ಮೊಬೈಲ್ ಆ್ಯಪ್ ನಿಂದ ಸಿಎನ್‌ಆರ್ ಸಂಖ್ಯೆಯನ್ನು ಪಡೆಯುವುದು ಹೇಗೆ:

ಸಿಎನ್‌ಆರ್ ಸಂಖ್ಯೆಯನ್ನು ಪಡೆಯಲು, ನೀವು ಜಿಲ್ಲೆ, ನ್ಯಾಯಾಲಯದ ಹೆಸರು ಮತ್ತು ಪ್ರಕರಣ ಸಂಖ್ಯೆ ಅಥವಾ ದಾಖಲಾತಿ ಸಂಖ್ಯೆ ಅಥವಾ ಪಕ್ಷಗಾರರ ಹೆಸರಿನಂತಹ ಯಾವುದೇ ಒಂದು ವಿವರಗಳನ್ನು ಹೊಂದಿರಬೇಕು.

ಪ್ರಕರಣ ಸಂಖ್ಯೆಯನ್ನು ಬಳಸಿ ಇ-ಕೋರ್ಟ್ಸ್ ಮೊಬೈಲ್ ಆ್ಯಪ್ ನಿಂದ ಸಿಎನ್‌ಆರ್ ಸಂಖ್ಯೆಯನ್ನು ಪಡೆಯುವುದು ಹೇಗೆ ಎಂದು ಹಂತ ಹಂತವಾಗಿ ನೋಡೋಣ.

ಉದಾಹರಣೆ: ಸಿಎನ್‌ಆರ್ ಸಂಖ್ಯೆಯನ್ನು ಹೇಗೆ ಪಡೆಯುವುದು

**ಹಂತ 1:** ಇ-ಕೋರ್ಟ್ಸ್ ಸೇವೆಗಳ ಮೊಬೈಲ್ ಆ್ಯಪ್ ಗೆ ಹೋಗಿ.


**ಹಂತ 2:** ಮುಖ್ಯ ಮೆನುವಿನಿಂದ ಪ್ರಕರಣದ ಸ್ಥಿತಿಯನ್ನು ಆಯ್ಕೆಮಾಡಿ.




**ಹಂತ 3:**

- ಪ್ರಕರಣ ಸ್ಥಿತಿ ಕ್ಲಿಕ್ ಮಾಡಿ.
- ರಾಜ್ಯ, ಜಿಲ್ಲೆ ಆಯ್ಕೆಮಾಡಿ.
- ಪ್ರಕರಣ ಸಂಖ್ಯೆ ಆಯ್ಕೆಯನ್ನು ಆರಿಸಿ.
- ಪ್ರಕರಣದ ಪ್ರಕಾರವನ್ನು ಆಯ್ಕೆಮಾಡಿ.
- ಪ್ರಕರಣ ಸಂಖ್ಯೆಯನ್ನು ಭರ್ತಿ ಮಾಡಿ.
- ವರ್ಷವನ್ನು ಭರ್ತಿ ಮಾಡಿ.
- ಗೋ ಬಟನ್ ಕ್ಲಿಕ್ ಮಾಡಿ.
- ನ್ಯಾಯಾಲಯದ ಹೆಸರಿನ ಮೇಲೆ ಕ್ಲಿಕ್ ಮಾಡಿದ ನಂತರ ಪ್ರಕರಣದ ವಿವರಗಳು ಗೋಚರಿಸುತ್ತವೆ.
  OS/50/2017 ಅಂಡರ್ ಲೈನ್ ಮಾಡಿ, ನೀಲಿ ಬಣ್ಣದಲ್ಲಿ ತೋರಿಸಲಾಗಿದೆ.
- ಪ್ರಕರಣದ ವಿವರಗಳು ಸಿಎನ್‌ಆರ್ ಸಂಖ್ಯೆಯೊಂದಿಗೆ ಗೋಚರಿಸುತ್ತವೆ.
- ನಿಮ್ಮ ಅನುಕೂಲಕ್ಕಾಗಿ ವಿವಿಧ ಹಂತಗಳ ಸ್ಕ್ರೀನ್‌ಶಾಟ್‌ಗಳನ್ನು ಇಲ್ಲಿ ಸೇರಿಸಲಾಗಿದೆ.




| Case Details | |
|---|---|
| Case Type | OS |
| Filing Number | 50/2017 |
| Filing Date | 24-06-2009 |
| Registration Number | 50/2017 |
| Registration Date | 24-06-2009 |
| CNR Number | TNTI160001902017 |

## 7.4. ಸಿಎನ್‌ಆರ್ ಸಂಖ್ಯೆಯನ್ನು  ಬಳಸಿಕೊಂಡು ಪ್ರಕರಣಗಳನ್ನು ಹುಡುಕುವುದು ಹೇಗೆ :

ಈಗ ಸಿಎನ್‌ಆರ್ ಸಂಖ್ಯೆಯನ್ನು ಬಳಸಿ ಪ್ರಕರಣದ ಸ್ಥಿತಿಯನ್ನು ಪಡೆಯುವ  ವಿಧಾನವನ್ನು ತಿಳಿಯೋಣ

**ಹಂತ 1:** ಮೊಬೈಲ್ ಆ್ಯಪ್ ನಲ್ಲಿ ಸಿಎನ್‌ಆರ್ ಐಕಾನ್ ಕ್ಲಿಕ್ ಮಾಡಿ.

**ಹಂತ 2:** ಸಿಎನ್‌ಆರ್ ಸಂಖ್ಯೆ ನಮೂದಿಸಿ.


**ಹಂತ 3:** ಹುಡುಕು ಬಟನ್ ಕ್ಲಿಕ್ ಮಾಡಿ.

**ಹಂತ 4:** ಪ್ರಕರಣದ ಇತಿಹಾಸವು ಈ ವಿವರಗಳನ್ನು ಪ್ರದರ್ಶಿಸುತ್ತದೆ : - ಪ್ರಕರಣದ ವಿವರ, ಪ್ರಕರಣದ ಸ್ಥಿತಿ, ಅರ್ಜಿದಾರನ ಮತ್ತು ವಕೀಲರ ವಿವರಗಳು, ಪ್ರತಿವಾದಿ ಮತ್ತು ವಕೀಲರ ವಿವರಗಳು, ಕಾಯಿದೆ ವಿವರಗಳು, ಪ್ರ.ವ.ವ. ವಿವರಗಳು, ಪ್ರಕರಣದ ವಿಚಾರಣೆ ಇತಿಹಾಸ, ಅಂತಿಮ ತೀರ್ಪು / ಆದೇಶಗಳು.

**ಹಂತ 5:** “ಪ್ರಕರಣ ವಿವರಗಳು” ಶೀರ್ಷಿಕೆಯ ಮೇಲೆ ಕ್ಲಿಕ್ ಮಾಡಿ.

**ಹಂತ 6:** ಇದು ಸಿಎನ್‌ಆರ್ ಸಂಖ್ಯೆ ಸೇರಿದಂತೆ ಪ್ರಕರಣದ ಇತರೆ ವಿವರಗಳನ್ನು ತೋರಿಸುತ್ತದೆ.

(ನಿಮ್ಮ ಅನುಕೂಲಕ್ಕಾಗಿ ಹಂತ 1 ರಿಂದ 6  ಸ್ಕ್ರೀನ್‌ಶಾಟ್‌ಗಳನ್ನು ಇಲ್ಲಿ ತೋರಿಸಲಾಗಿದೆ)



## 8. ವಿವಿಧ ಆಯ್ಕೆಗಳನ್ನು ಬಳಸಿ ಪ್ರಕರಣದ ಸ್ಥಿತಿಯನ್ನು ಹುಡುಕುವುದು :

ಕೆಳಗೆ ತಿಳಿಸಿರುವ ಏಳು ಆಯ್ಕೆಗಳೊಂದಿಗೆ ನಿಮ್ಮ ಪ್ರಕರಣದ ಸ್ಥಿತಿಯನ್ನು ಹುಡುಕಿ

i. ಪ್ರಕರಣ ಸಂಖ್ಯೆ

ii. ದಾಖಲಾತಿ ಸಂಖ್ಯೆ

iii. ವಕೀಲ

iv. ಪ್ರಕರಣದ ಪ್ರಕಾರ


v. ಪಕ್ಷಗಾರನ ಹೆಸರು

vi. ಪ್ರ.ವ.ವ. ಸಂಖ್ಯೆ

vii. ಕಾಯಿದೆ

viii. ಪೂರ್ವಭಾವಿ ಅರ್ಜಿ

ix. ಕೇವಿಯೆಟ್




ಸಿಎನ್‌ಆರ್ ಸಂಖ್ಯೆ ತಿಳಿದಿಲ್ಲದಿದ್ದರೆ, ಯಾವುದೇ ಆಯ್ಕೆಗಳನ್ನು ಬಳಸಿಕೊಂಡು ಪ್ರಕರಣವನ್ನು ಹುಡುಕಬಹುದು. ಈಗ ನಾವು ಪ್ರಕರಣದ ಸ್ಥಿತಿಯ ಅಡಿಯಲ್ಲಿ ಮೊದಲ ಆಯ್ಕೆಯನ್ನು ನೋಡೋಣ, ಅಂದರೆ ಪ್ರಕರಣ ಸಂಖ್ಯೆ ಆಯ್ಕೆಯನ್ನು ಬಳಸುವುದು.

**ಪ್ರಕರಣ ಸಂಖ್ಯೆ ಮೂಲಕ ಪ್ರಕರಣಗಳ ಸ್ಥಿತಿ ಪಡೆಯಲು**

→ ಮೊಬೈಲ್ ಆ್ಯಪ್‌ನಲ್ಲಿ ಪ್ರಕರಣದ ಸ್ಥಿತಿ ಕ್ಲಿಕ್ ಮಾಡಿ.

→ ರಾಜ್ಯ, ಜಿಲ್ಲೆ ಆಯ್ಕೆಮಾಡಿ.

→ ಯಾವುದೇ ಒಂದು ಆಯ್ಕೆಯ ಮೇಲೆ ಕ್ಲಿಕ್ ಮಾಡಿ.

→ ಆಯ್ಕೆಗೆ ಅನುಗುಣವಾದ ಪುಟ ತೆರೆಯುತ್ತದೆ.

→ ವಿವರಗಳನ್ನು ಭರ್ತಿ ಮಾಡಿ.

→ ಪ್ರಕರಣಗಳ ಪಟ್ಟಿಯನ್ನು ಪ್ರದರ್ಶಿಸಲಾಗುತ್ತದೆ.

→ ಪ್ರಕರಣ ಸಂಖ್ಯೆ ಮೇಲೆ ಕ್ಲಿಕ್ ಮಾಡಿದಾಗ, ಅದು ಪ್ರಕರಣದ ಇತಿಹಾಸವನ್ನು ಮತ್ತಷ್ಟು ವಿಸ್ತರಿಸುತ್ತದೆ.

→ ನೀವು ಕ್ಲಿಕ್ ಮಾಡಿದ ಶೀರ್ಷಿಕೆಗಳಿಗನುಗುಣವಾಗಿ ವಿವರಗಳನ್ನು ಮತ್ತಷ್ಟು ವಿಸ್ತರಿಸುತ್ತದೆ.

**8.1 ಪ್ರಕರಣ ಸಂಖ್ಯೆ ಆಯ್ಕೆಯನ್ನು ಬಳಸಿಕೊಂಡು ಪ್ರಕರಣದ ಸ್ಥಿತಿಯನ್ನು ವೀಕ್ಷಿಸುವುದು :**

ಈಗ ನಾವು ಪ್ರಕರಣದ ಸ್ಥಿತಿ ಅಡಿಯಲ್ಲಿ ಮೊದಲ ಆಯ್ಕೆಯನ್ನು ನೋಡೋಣ, ಅಂದರೆ "ಇ-ಕೋರ್ಟ್ಸ್ ಸೇವೆಗಳು" ಮೊಬೈಲ್ ಆ್ಯಪ್ ನ ಪ್ರಕರಣ ಸಂಖ್ಯೆ ಆಯ್ಕೆಯನ್ನು ಬಳಸುವುದು.




**ಹಂತ 1:** ಇ-ಕೋರ್ಟ್ಸ್ ಮೆನುವಿನಿಂದ ಪ್ರಕರಣ ಸ್ಥಿತಿಯನ್ನು ಕ್ಲಿಕ್ ಮಾಡಿ.

**ಹಂತ 2:** ರಾಜ್ಯ ಮತ್ತು ಜಿಲ್ಲೆಯನ್ನು ಆಯ್ಕೆ ಮಾಡಿ.

**ಹಂತ 3:** ಪ್ರಕರಣ ಸಂಖ್ಯೆ ಆಯ್ಕೆಯನ್ನು ಕ್ಲಿಕ್ ಮಾಡಿದಾಗ, ಅದು ಇಲ್ಲಿ ತೋರಿಸಿರುವಂತೆ ಫಾರ್ಮ್ ಅನ್ನು ತೆರೆಯುತ್ತದೆ ಮತ್ತು ಕೆಳಗಿನ ವಿವರಗಳನ್ನು ಭರ್ತಿ ಮಾಡಿ.

- ನ್ಯಾಯಾಲಯ ಸಂಕೀರ್ಣ
- ಪ್ರಕರಣದ ಪ್ರಕಾರ
- ಪ್ರಕರಣ ಸಂಖ್ಯೆ
- ವರ್ಷ

**ಹಂತ 4:** ವಿವರಗಳನ್ನು ಭರ್ತಿ ಮಾಡಿದ ನಂತರ ಗೋ ಬಟನ್ ಕ್ಲಿಕ್ ಮಾಡಿ.

**ಹಂತ 5:** ಒಟ್ಟು ಪ್ರಕರಣಗಳ ಸಂಖ್ಯೆಯನ್ನು ಪ್ರದರ್ಶಿಸಲಾಗುತ್ತದೆ.

**ಹಂತ 6:** ನಾವು ಪ್ರಕರಣ ಸಂಖ್ಯೆ ಕ್ಲಿಕ್ ಮಾಡಿದಾಗ ಮೆನು ಕೆಳಗಿನವುಗಳೊಂದಿಗೆ ಪ್ರದರ್ಶಿಸುತ್ತದೆ.

(i) ಪ್ರಕರಣದ ವಿವರ ; (ii) ಪ್ರಕರಣದ ಸ್ಥಿತಿ ; (iii) ಅರ್ಜಿದಾರ ಮತ್ತು ವಕೀಲರ ವಿವರಗಳು ;

(iv) ಪ್ರತಿವಾದಿ ಮತ್ತು ವಕೀಲರ ವಿವರಗಳು ; (v) ಕಾಯಿದೆ ವಿವರಗಳು ; (vi) ಪ್ರ.ವ.ವ. ವಿವರಗಳು ;

(vii) ಅಧೀನ ನ್ಯಾಯಾಲಯದ ಮಾಹಿತಿ ; (viii) ಪ್ರಕರಣದ ವಿಚಾರಣೆ ಇತಿಹಾಸ ;

(ix) ಮದ್ಯಂತರ ಆದೇಶ ; (x) ಅಂತಿಮ ತೀರ್ಪು / ಆದೇಶಗಳು ;


***(* ಪ್ರತಿ ಬಾರಿ ಪ್ರಕರಣದ ಸ್ಥಿತಿ ಆಯ್ಕೆಯನ್ನು ಬಳಸುವಾಗ ರಾಜ್ಯ, ಜಿಲ್ಲೆಯನ್ನು ಆಯ್ಕೆ ಮಾಡಲಾಗಿದೆಯೆ ಎಂದು ಖಚಿತ ಪಡಿಸಿಕೊಳ್ಳಿ. )***

## 8.2 ಫೈಲಿಂಗ್ ಸಂಖ್ಯೆ ಆಯ್ಕೆಯನ್ನು ಬಳಸಿಕೊಂಡು ಪ್ರಕರಣದ ಸ್ಥಿತಿಯನ್ನು ವೀಕ್ಷಿಸುವುದು:

ಪ್ರಕರಣ ಸ್ಥಿತಿಯಲ್ಲಿ ಲಭ್ಯವಿರುವ ಎರಡನೇ ಆಯ್ಕೆ ಎಂದರೆ ದಾಖಲಾತಿ ಸಂಖ್ಯೆ ಆಯ್ಕೆಯನ್ನು ಬಳಸುವುದು.

**ದಾಖಲಾತಿ ಸಂಖ್ಯೆ ಮೂಲಕ ಪ್ರಕರಣಗಳ ಸ್ಥಿತಿ ಪಡೆಯಲು**

→ ಪ್ರಕರಣ ಸ್ಥಿತಿ ಆಯ್ಕೆ ಕ್ಲಿಕ್ ಮಾಡಿ.
→ ರಾಜ್ಯ, ಜಿಲ್ಲೆ ಆಯ್ಕೆಮಾಡಿ.
→ ದಾಖಲಾತಿ ಸಂಖ್ಯೆ ಆಯ್ಕೆ ಮೇಲೆ ಕ್ಲಿಕ್ ಮಾಡಿ.
→ ಡ್ರಾಪ್ ಬಾಕ್ಸ್ ನಿಂದ ನ್ಯಾಯಾಲಯ ಸಂಕೀರ್ಣ ಆಯ್ಕೆ ಮಾಡಿ
→ ದಾಖಲಾತಿ ಸಂಖ್ಯೆ ಮತ್ತು ವರ್ಷ ಭರ್ತಿ ಮಾಡಿ.
→ ಹೋಗು ಬಟನ್ ಕ್ಲಿಕ್ ಮಾಡಿದಾಗ, ಪ್ರಕರಣದ ಸ್ಥಿತಿ ಕಾಣಲ್ಪಡುತ್ತದೆ.
→ ನೀವು ಕ್ಲಿಕ್ ಮಾಡಿದ ಶೀರ್ಷಿಕೆಗಳಿಗನುಗುಣವಾಗಿ ವಿವರಗಳನ್ನು ಮತ್ತಷ್ಟು ವಿಸ್ತರಿಸುತ್ತದೆ.




## 8.3 ಎಫ್ಐಆರ್ ಸಂಖ್ಯೆಯನ್ನು ಬಳಸಿ ಹುಡುಕುವುದು:

**ಪ್ರ.ವ.ವ. ಸಂಖ್ಯೆ ಮೂಲಕ ಪ್ರಕರಣಗಳ ಸ್ಥಿತಿ ಪಡೆಯಲು**

→ ಪ್ರಕರಣದ ಸ್ಥಿತಿ ಕ್ಲಿಕ್ ಮಾಡಿ

→ ರಾಜ್ಯ, ಜಿಲ್ಲೆ ಆಯ್ಕೆಮಾಡಿ

→ ಪ್ರ.ವ.ವ. ಸಂಖ್ಯೆ ಆಯ್ಕೆಯನ್ನು ಕ್ಲಿಕ್ ಮಾಡಿ

→ ನ್ಯಾಯಾಲಯ ಸಂಕೀರ್ಣವನ್ನು ಆರಿಸಿ

→ ಪೊಲೀಸ್ ಠಾಣೆ ಆಯ್ಕೆಮಾಡಿ


→ ಪ್ರ.ವ.ವ. ಸಂಖ್ಯೆ ಮತ್ತು ವರ್ಷ ನಮೂದಿಸಿ

→ ಬಾಕಿ / ವಿಲೇವಾರಿಗಾಗಿ / ಎರಡೂ ರೇಡಿಯೊ ಬಟನ್ ಆಯ್ಕೆಮಾಡಿ

→ ಹೋಗು ಬಟನ್ ಕ್ಲಿಕ್ ಮಾಡಿ

→ ನಂತರ ಪ್ರ.ವ.ವ. ಸಂಖ್ಯೆಯ ವಿವರ ಪ್ರದರ್ಶಿಸಲಾಗುತ್ತದೆ

→ ಪ್ರಕರಣ ಸಂಖ್ಯೆಯ ಮೇಲೆ ಕ್ಲಿಕ್ ಮಾಡಿದಾಗ ಪ್ರಕರಣದ ಇತಿಹಾಸವನ್ನು ಮತ್ತಷ್ಟು ತೆರೆಯುತ್ತದೆ.



## 8.4 ವಕೀಲರು ಆಯ್ಕೆಯನ್ನು ಬಳಸಿಕೊಂಡು ಪ್ರಕರಣದ ಸ್ಥಿತಿಯನ್ನು ವೀಕ್ಷಿಸುವುದು:

ಈ ಆಯ್ಕೆಯು ವಕೀಲರ ಸಹಾಯಕನಾಗಿ ಕೆಲಸ ಮಾಡುವುದರಿಂದ ಇದನ್ನು ಡಿಜಿಟಲ್ ಸಹಾಯಕ ಎಂದೇ ಪರಿಗಣಿಸಬಹುದು. ಉದಾಹರಣೆಗೆ, ವಕೀಲರ ಹೆಸರಿನಲ್ಲಿ ಎಲ್ಲಾ ನ್ಯಾಯಾಲಯಗಳಲ್ಲಿ ಎಷ್ಟು ಪ್ರಕರಣಗಳು ಬಾಕಿ ಉಳಿದಿವೆ ಎಂಬುದನ್ನು ಈ ಆಯ್ಕೆಯು ತೋರಿಸುತ್ತದೆ; ಯಾವುದೇ ನಿರ್ದಿಷ್ಟ ದಿನಾಂಕದಂದು ಯಾವ ಪ್ರಕರಣಗಳನ್ನು ಪಟ್ಟಿ ಮಾಡಲಾಗಿದೆ; ಮತ್ತು ಪ್ರಕರಣಗಳು ಯಾವ ಹಂತದಲ್ಲಿವೆ ಎಂದು ಅವರ ಹ್ಯಾಂಡ್‌ಸೆಟ್‌ಗಳಲ್ಲಿ 24 * 7 ಪಡೆಯಬಹುದು. ವಕೀಲರು ಈ ಹುಡುಕಾಟ ಆಯ್ಕೆಯನ್ನು ಈ ಕೆಳಗಿನ ಮೂರು ಆಯ್ಕೆಗಳ ಅಡಿಯಲ್ಲಿ ಬಳಸಬಹುದು.


(i) ವಕೀಲರ ಹೆಸರನ್ನು ಬಳಸಿ ಹುಡುಕಿ

(ii) ಬಾರ್ ಕೋಡ್ ಸಂಖ್ಯೆಯನ್ನು ಬಳಸಿ ಹುಡುಕಿ

(iii) ದಿನಾಂಕಾವಾರು ಪ್ರಕರಣ ಪಟ್ಟಿ ಆಯ್ಕೆಯನ್ನು ಬಳಸಿಕೊಂಡು, ನಿರ್ದಿಷ್ಟ ದಿನದಲ್ಲಿ ನಿರ್ದಿಷ್ಟ ವಕೀಲರ ಹೆಸರಿನಲ್ಲಿ ಪಟ್ಟಿ ಮಾಡಲಾದ ಪ್ರಕರಣಗಳನ್ನು ಹುಡುಕಿ

### 8.4.1 ವಕೀಲರ ಹೆಸರಿನಿಂದ ಹುಡುಕುವುದು:

ವಕೀಲರು ತನ್ನ ಹೆಸರಿನಲ್ಲಿ ಎಷ್ಟು ಪ್ರಕರಣಗಳು ಬಾಕಿ ಉಳಿದಿವೆ ಅಥವಾ ಅವರ ಹೆಸರಿನಲ್ಲಿ ಎಷ್ಟು ಪ್ರಕರಣಗಳನ್ನು ವಿಲೇವಾರಿ ಮಾಡಲಾಗಿದೆಯೆಂದು ತಿಳಿಯಲು ಬಯಸಿದರೆ, ವಕೀಲರ ಹೆಸರಿನ ಈ ಆಯ್ಕೆಯನ್ನು ಬಳಸಿಕೊಂಡು ಎಲ್ಲಾ ವಿವರಗಳನ್ನು ಪಡೆಯಬಹುದು. ಉದಾಹರಣೆಗೆ: ಇಲ್ಲಿ ತೋರಿಸಿರುವ ಸ್ಕ್ರೀನ್‌ಶಾಟ್‌ನಲ್ಲಿ ವಕೀಲರ ಹೆಸರಿನಲ್ಲಿ “ರಾಜಪ್ಪ” ಎಂದು ಹುಡುಕಿದಾಗ ತಮಿಳುನಾಡಿನ ತಂಜಾವೂರಿನಲ್ಲಿ ಬಾಕಿ ಇರುವ 13 ಪ್ರಕರಣಗಳನ್ನು ತೋರಿಸುತ್ತದೆ ಮತ್ತು ನ್ಯಾಯಾಲಯವಾರು ಎಷ್ಟು ಪ್ರಕರಣಗಳು ಬಾಕಿ ಉಳಿದಿವೆ ಎಂಬುದನ್ನು ತೋರಿಸುತ್ತದೆ. ಸಂಖ್ಯೆಯನ್ನು ಕ್ಲಿಕ್ ಮಾಡಿದರೆ, ಪ್ರಕರಣದ ಇತಿಹಾಸದೊಂದಿಗೆ ವಿಸ್ತರಿಸಬಹುದಾದ ಸಂಪೂರ್ಣ ಪಟ್ಟಿಯನ್ನು ತೋರಿಸುತ್ತದೆ.





**ವಕೀಲರ ಹೆಸರಿನ ಮೂಲಕ ಪ್ರಕರಣಗಳ ಸ್ಥಿತಿ ಪಡೆಯಲು**

→ ಪ್ರಕರಣ ಸ್ಥಿತಿ ಆಯ್ಕೆ ಕ್ಲಿಕ್ ಮಾಡಿ
→ ರಾಜ್ಯ, ಜಿಲ್ಲೆ ಆಯ್ಕೆಮಾಡಿ
→ ವಕೀಲರು ಆಯ್ಕೆ ಮೇಲೆ ಕ್ಲಿಕ್ ಮಾಡಿ
→ ವಕೀಲರ ಹೆಸರು ಆಯ್ಕೆ ಮಾಡಿ ಹೆಸರು ನಮೂದಿಸಿ
→ ಬಾಕಿ / ವಿಲೇವಾರಿಗಾಗಿ / ಎರಡೂ ರೇಡಿಯೊ ಬಟನ್ ಆಯ್ಕೆಮಾಡಿ
→ ಹೋಗು ಬಟನ್ ಕ್ಲಿಕ್ ಮಾಡಿ
→ ವಿವಿಧ ನ್ಯಾಯಾಲಯದಲ್ಲಿ ವಕೀಲರ ಹೆಸರಿನಲ್ಲಿ ಲಭ್ಯವಿರುವ ಪ್ರಕರಣಗಳನ್ನು ಪಟ್ಟಿ ಮಾಡುತ್ತದೆ
→ ಪ್ರಕರಣ ಸಂಖ್ಯೆ ಮೇಲೆ ಕ್ಲಿಕ್ ಮಾಡಿದಾಗ ಪ್ರಕರಣದ ವಿವರಗಳು ವಿಸ್ತರಿಸುತ್ತದೆ.

## 8.4.2. ಬಾರ್ ಕೋಡ್ ಬಳಸಿ ಹುಡುಕುವುದು :

ವಕೀಲರು ತಮ್ಮ ವಕೀಲರ ಬಾರ್ ಕೋಡ್ ಬಳಸಿ ತಮ್ಮ ಪ್ರಕರಣಗಳು ಮತ್ತು ವ್ಯಾಜ್ಯ ಪಟ್ಟಿಯನ್ನು ಹುಡುಕಬಹುದು. ಇದು ಜಿಲ್ಲೆಯಲ್ಲಿನ ಎಲ್ಲಾ ನ್ಯಾಯಾಲಯ ಘಟಕಗಳಲ್ಲಿ ಬಾಕಿ ಇರುವ ಮತ್ತು ವಿಲೇವಾರಿಯಾಗಿರುವ ಒಟ್ಟು ಪ್ರಕರಣಗಳನ್ನು ಪ್ರದರ್ಶಿಸುತ್ತದೆ. ಮುಂದಿನ ಪ್ಯಾರಾದಲ್ಲಿ ವಿವರಿಸಿದಂತೆ ಬಾರ್ ಕೋಡ್ ಬಳಸಿ ದಿನಾಂಕಾವಾರು ವ್ಯಾಜ್ಯ ಪಟ್ಟಿಯನ್ನು ಸಹ ಹುಡುಕಬಹುದು. ಇಲ್ಲಿ ವಕೀಲರ ಬಾರ್ ಕೋಡ್ ಎಂದರೆ ವಕೀಲರ ಅನನ್ಯ ಗುರುತಿನ ಸಂಖ್ಯೆ ಎಂದು ಗಮನಸೆಳೆಯುವುದು ಮುಖ್ಯ ಹಾಗೂ ಇದನ್ನು ಡೇಟಾ ಬೇಸ್‌ನಲ್ಲಿ ಸರಿಯಾಗಿ ನಮೂದಿಸಿರಬೇಕು. ಮೊಬೈಲ್ ಅಪ್ಲಿಕೇಶನ್‌ನಲ್ಲಿ ವಕೀಲರ ಬಾರ್ ಕೋಡ್ ಸರಿಯಾಗಿ ಪ್ರತಿಫಲಿಸುತ್ತಿಲ್ಲವಾದರೆ, ದಯವಿಟ್ಟು ನೀವು ನೋಂದಾಯಿಸಲಾಗಿರುವ ಸಂಬಂಧಪಟ್ಟ ನ್ಯಾಯಾಲಯಕ್ಕೆ ತಿಳಿಸಿ ತಮ್ಮ ಬಾರ್ ಕೋಡ್ ಸರಿಪಡಿಸಿಕೊಳ್ಳಿ.

ಉದಾಹರಣೆ: ಮಹಾರಾಷ್ಟ್ರ ವಕೀಲ ಅಗರ್ವಾಲ್ ಕೆ. ಡಿ. ಅವರ ಬಾರ್ ಕೋಡ್ ಹುಡುಕಾಟವು ಒಟ್ಟು 778 ಪ್ರಕರಣಗಳನ್ನು ತೋರಿಸುತ್ತದೆ.




**ವಕೀಲರ ಬಾರ್ ಕೋಡ್ ಮೂಲಕ ಪ್ರಕರಣಗಳ ಸ್ಥಿತಿ ಪಡೆಯಲು**

→ ಪ್ರಕರಣ ಸ್ಥಿತಿ ಆಯ್ಕೆ ಕ್ಲಿಕ್ ಮಾಡಿ

→ ರಾಜ್ಯ, ಜಿಲ್ಲೆ ಆಯ್ಕೆಮಾಡಿ

→ ವಕೀಲರು ಆಯ್ಕೆ ಮೇಲೆ ಕ್ಲಿಕ್ ಮಾಡಿ


→ ವಕೀಲರ ಬಾರ್ ಕೋಡ್ ಆಯ್ಕೆ ಮಾಡಿ ಹಾಗೂ ಬಾರ್ ಕೋಡ್ ನಮೂದಿಸಿ

→ ಬಾಕಿ / ವಿಲೇವಾರಿಗಾಗಿ / ಎರಡೂ ರೇಡಿಯೊ ಬಟನ್ ಆಯ್ಕೆಮಾಡಿ

→ ಹೋಗು ಬಟನ್ ಕ್ಲಿಕ್ ಮಾಡಿ


→ ವಿವಿಧ ನ್ಯಾಯಾಲಯದಲ್ಲಿ ವಕೀಲರ ಹೆಸರಿನಲ್ಲಿ ಲಭ್ಯವಿರುವ ಪ್ರಕರಣಗಳನ್ನು ಪಟ್ಟಿ ತೋರಿಸುತ್ತದೆ

→ ಪ್ರಕರಣ ಸಂಖ್ಯೆ ಮೇಲೆ ಕ್ಲಿಕ್ ಮಾಡಿದಾಗ ಪ್ರಕರಣದ ವಿವರಗಳು ವಿಸ್ತರಿಸುತ್ತದೆ.



### 8.4.3 ದಿನಾಂಕಾವಾರು ಪ್ರಕರಣಗಳ ಪಟ್ಟಿಯನ್ನು ಬಳಸಿ ಹುಡುಕುವುದು (ವಕೀಲರ ವ್ಯಾಜ್ಯ ಪಟ್ಟಿ):

ವಕೀಲರು ತನ್ನ ಹೆಸರಿನ ವ್ಯಾಜ್ಯ ಪಟ್ಟಿಯನ್ನು ತಿಳಿದುಕೊಳ್ಳಲು ಬಯಸಿದರೆ, ಅಂದರೆ ನ್ಯಾಯಾಲಯಗಳಲ್ಲಿ ಅವರ ಹೆಸರಿನಲ್ಲಿ ಯಾವುದೇ ನಿರ್ದಿಷ್ಟ ದಿನಾಂಕದಂದು ಎಷ್ಟು ಪ್ರಕರಣಗಳು ಬರಲಿವೆ ಎಂದು ತಿಳಿದುಕೊಳ್ಳಲು ಬಯಸಿದರೆ, ಆಗ ಈ ದಿನಾಂಕಾವಾರು ವ್ಯಾಜ್ಯ ಪಟ್ಟಿ ಆಯ್ಕೆಯನ್ನು ಬಳಸಬಹುದು, ಮತ್ತು ವಕೀಲರ ವ್ಯಾಜ್ಯ ಪಟ್ಟಿಯನ್ನು ರಚಿಸಬಹುದು. ವಕೀಲರ ವ್ಯಾಜ್ಯ ಪಟ್ಟಿಯಲ್ಲಿನ ಅನುಕೂಲವೆಂದರೆ ಅದು ಪಟ್ಟಿ ಮಾಡಲಾದ ಪ್ರಕರಣಗಳ ನಿರ್ದಿಷ್ಟ ದಿನಾಂಕ ಹಾಗೂ ಪ್ರಕರಣದ ಹಂತವನ್ನು ತೋರಿಸುತ್ತದೆ.




**ದಿನಾಂಕಾವಾರು ಪ್ರಕರಣಗಳ ಪಟ್ಟಿಯನ್ನು (ವಕೀಲರ ವ್ಯಾಜ್ಯ ಪಟ್ಟಿ ) ಬಳಸಿ ಹುಡುಕಲು**

→ ದಿನಾಂಕಾವಾರು ಪ್ರಕರಣಗಳ ಪಟ್ಟಿ ಆಯ್ಕೆ ಕ್ಲಿಕ್ ಮಾಡಿ


→ ವಕೀಲರ ಬಾರ್ ಕೋಡ್ ನಮೂದಿಸಿ

→ ದಿನಾಂಕ ಆಯ್ಕೆಮಾಡಿ

→ ಹೋಗು ಬಟನ್ ಕ್ಲಿಕ್ ಮಾಡಿ

→ ಒಟ್ಟು ಪ್ರಕರಣ ಸಂಖ್ಯೆ ಮೇಲೆ ಕ್ಲಿಕ್ ಮಾಡಿ

→ ವಕೀಲರ ವ್ಯಾಜ್ಯ ಪಟ್ಟಿ ಅಂದರೆ, ನಿರ್ದಿಷ್ಟ ವಕೀಲರ ಹೆಸರಿನ ದಿನಾಂಕಾವಾರು ವ್ಯಾಜ್ಯ ಪಟ್ಟಿ ತೋರಿಸುತ್ತದೆ.


Total Number of Establishments in Court Complex:3
Advocate's Cause list: 01-10-2020
Advocate: AGRAWAL K.D.
Total Number of Cases: 3


Civil Court Senior Division, Aurangabad : 3

| Case Number | Party Name | Court Name |
|---|---|---|
| R.C.S./547/2019 | IDBI Bank Ltd vs Shravan Enterprises | 1-SHRI S.B. PAWAR-Civil Judge S.D. Aurangabad. |
| Spl.C.S./235/2019 | IDBI Bank Ltd vs Ashwadip Ramprakash Netane | 21-SHRI J.M. AMBODKAR-IV Jt.Civil Judge S.D. Aurangabad. |
| Spl.C.S./33/2018 | Shreeram Housing Finance Ltd | 32-SHRI R.M. TUWAR-IX Jt.Civil Judge S.D. Aurangabad. |

## 8.5. ಪ್ರಕರಣ ಪ್ರಕಾರದ ಆಯ್ಕೆಯನ್ನು ಬಳಸಿಕೊಂಡು ಪ್ರಕರಣದ ಸ್ಥಿತಿಯನ್ನು ಪಡೆಯುವುದು:

ಒಬ್ಬ ವ್ಯಕ್ತಿಯು ಪ್ರಕರಣ ಪ್ರಕಾರದ ಪಟ್ಟಿಯನ್ನು ಪಡೆಯಲು ಬಯಸಿದರೆ, ಈ ಆಯ್ಕೆಯನ್ನು ಬಳಸಬಹುದು. ಯಾವುದಾದರು ಒಂದು ಪ್ರಕಾರವನ್ನು ಆರಿಸುವ ಮೂಲಕ, ಪ್ರಕರಣದ ಪ್ರಕಾರಾವಾರು ಪಟ್ಟಿಯನ್ನು ಪಡೆಯಬಹುದು.

ಈ ಸ್ಕ್ರೀನ್‌ಶಾಟ್‌ನಲ್ಲಿ ಆಯ್ಕೆ ಮಾಡಲಾದ ಪ್ರಕರಣವು "ಮೇಲ್ಮನವಿಗಳು". ಆದ್ದರಿಂದ ಮೇಲ್ಮನವಿ ಸೂಟ್ 'ಎಎಸ್' ಎಂದು ಪಟ್ಟಿಯಲ್ಲಿ ತೋರಿಸಲಾಗಿದೆ. ಅಂತೆಯೇ, ಯಾವುದೇ ಪ್ರಕರಣದ ಪ್ರಕಾರವನ್ನು ಆರಿಸುವ ಮೂಲಕ, ನೀವು ಪ್ರಕರಣದ ಪ್ರಕಾರವಾರು ಪಟ್ಟಿಯನ್ನು ಪಡೆಯಬಹುದು.




**ವಿವಿಧ ಪ್ರಕಾರದ ಪ್ರಕರಣಗಳನ್ನು ಹುಡುಕಲು**

→ ಪ್ರಕರಣ ಪ್ರಕಾರ ಆಯ್ಕೆಯನ್ನು ಕ್ಲಿಕ್ ಮಾಡಿ

→ ನ್ಯಾಯಾಲಯ ಸಂಕೀರ್ಣ ಆಯ್ಕೆಯನ್ನು ಆರಿಸಿ

→ ಪ್ರಕರಣ ಪ್ರಕಾರ ಆರಿಸಿ

→ ವರ್ಷವನ್ನು ಭರ್ತಿ ಮಾಡಿ

→ ಬಾಕಿ / ವಿಲೇವಾರಿಗಾಗಿ ರೇಡಿಯೊ ಬಟನ್ ಆಯ್ಕೆಮಾಡಿ

→ ಹೋಗು ಬಟನ್ ಕ್ಲಿಕ್ ಮಾಡಿ

→ ನಂತರ ಆಯ್ಕೆ ಮಾಡಿದ ಪ್ರಕರಣ ಪ್ರಕಾರದ ಪ್ರಕರಣಗಳನ್ನು ಪ್ರದರ್ಶಿಸಲಾಗುತ್ತದೆ

→ ಪ್ರಕರಣ ಸಂಖ್ಯೆಯ ಮೇಲೆ ಕ್ಲಿಕ್ ಮಾಡಿದಾಗ ಪ್ರಕರಣ ಇತಿಹಾಸವನ್ನು ಪಡೆಯುವಿರಿ


→ ಆಯಾ ಶೀರ್ಷಿಕೆಗಳ ಮೇಲೆ ಕ್ಲಿಕ್ ಮಾಡಿದರೆ ಅದು ಮತ್ತಷ್ಟು ವಿವರಗಳಾಗಿ ವಿಸ್ತರಿಸುತ್ತದೆ.

## 8.6. ಪಕ್ಷಗಾರರ ಆಯ್ಕೆಯನ್ನು ಬಳಸಿಕೊಂಡು ಪ್ರಕರಣದ ಸ್ಥಿತಿಯನ್ನು ವೀಕ್ಷಿಸುವುದು:

“ಪಾರ್ಟಿ” ಆಯ್ಕೆಯನ್ನು ಬಳಸಿಕೊಂಡು ಪಕ್ಷಗಾರರ ಹೆಸರಿನ ಮೂಲಕ ಪ್ರಕರಣಗಳನ್ನು ಹುಡುಕಬಹುದು. ಉದಾಹರಣೆಗೆ, ಇಲ್ಲಿ ತೋರಿಸಿದ ಸ್ಕ್ರೀನ್‌ಶಾಟ್‌ನಲ್ಲಿ ಪಕ್ಷಗಾರರ ಹೆಸರಿನಲ್ಲಿ “ರಂಗಸ್ವಾಮಿ” ಯನ್ನು ಹುಡುಕಾಟಕ್ಕಾಗಿ ಬಳಸಲಾಗಿದೆ ಹಾಗಾಗಿ “ರಂಗಸ್ವಾಮಿ” ಹೆಸರಿನ ಪ್ರಕರಣಗಳನ್ನು ಪ್ರದರ್ಶಿಸಲಾಗಿದೆ. ಅಂತೆಯೇ, ನೀವು ವಿವಿಧ ಹೆಸರಿಗಾಗಿ ಪಕ್ಷಗಾರರ ಹೆಸರು ಹುಡುಕಾಟ ಆಯ್ಕೆಯನ್ನು ಬಳಸಿಕೊಂಡು ಪ್ರಕರಣಗಳನ್ನು ಹುಡುಕಬಹುದು.

**ವಿವಿಧ ಪಕ್ಷಗಾರರ ಹೆಸರಿನಿಂದ ಹುಡುಕಲು**


→ ಪ್ರಕರಣದ ಸ್ಥಿತಿ ಕ್ಲಿಕ್ ಮಾಡಿ
→ ರಾಜ್ಯ, ಜಿಲ್ಲೆ ಆಯ್ಕೆಮಾಡಿ
→ ಪಕ್ಷಗಾರರ ಆಯ್ಕೆಯನ್ನು ಕ್ಲಿಕ್ ಮಾಡಿ
→ ನ್ಯಾಯಾಲಯ ಸಂಕೀರ್ಣವನ್ನು ಆರಿಸಿ
→ ವಾದಿ / ಪ್ರತಿವಾದಿಯ ಹೆಸರನ್ನು ಆಯ್ಕೆಮಾಡಿ
→ ವರ್ಷವನ್ನು ನಮೂದಿಸಿ
→ ಬಾಕಿ / ವಿಲೇವಾರಿಗಾಗಿ ರೇಡಿಯೊ ಬಟನ್ ಆಯ್ಕೆಮಾಡಿ
→ ಹೋಗು ಬಟನ್ ಕ್ಲಿಕ್ ಮಾಡಿ
→ ನಂತರ ಪಕ್ಷಗಾರರ ಹೆಸರಿನ ಪ್ರಕರಣಗಳ ಸಂಖ್ಯೆಯನ್ನು ತೋರಿಸಲಾಗುತ್ತದೆ
→ ನಂತರ ಅಗತ್ಯವಿರುವ ಪ್ರಕರಣ ಸಂಖ್ಯೆಯನ್ನು ಕ್ಲಿಕ್ ಮಾಡಿ
→ ಪ್ರಕರಣದ ಇತಿಹಾಸವನ್ನು ಪ್ರದರ್ಶಿಸಲಾಗುತ್ತದೆ.




## 8.7. ಕಾಯಿದೆ ಪ್ರಕಾರ ಹುಡುಕು :

**ಕಾಯಿದೆಗಳ ಮೂಲಕ ಹುಡುಕಲು**

→ ಪ್ರಕರಣದ ಸ್ಥಿತಿ ಕ್ಲಿಕ್ ಮಾಡಿ
→ ರಾಜ್ಯ, ಜಿಲ್ಲೆ ಆಯ್ಕೆಮಾಡಿ
→ ಕಾಯಿದೆ ಆಯ್ಕೆಯನ್ನು ಕ್ಲಿಕ್ ಮಾಡಿ
→ ನ್ಯಾಯಾಲಯ ಸಂಕೀರ್ಣವನ್ನು ಆರಿಸಿ
→ ಕಾಯಿದೆ ಆಯ್ಕೆಮಾಡಿ
→ ಬಾಕಿ / ವಿಲೇವಾರಿಗಾಗಿ / ಎರಡೂ ರೇಡಿಯೊ ಬಟನ್ ಆಯ್ಕೆಮಾಡಿ
→ ಹೋಗು ಬಟನ್ ಕ್ಲಿಕ್ ಮಾಡಿ
→ ಆಯ್ಕೆ ಮಾಡಿದ ಕಾಯಿದೆಗೆ ಹೊಂದುವ ಪ್ರಕರಣಗಳನ್ನು ಪ್ರದರ್ಶಿಸಲಾಗುತ್ತದೆ
→ ಪ್ರಕರಣ ಸಂಖ್ಯೆಯ ಮೇಲೆ ಕ್ಲಿಕ್ ಮಾಡಿದಾಗ ಪ್ರಕರಣದ ಇತಿಹಾಸವನ್ನು ಮತ್ತಷ್ಟು ತೆರೆಯುತ್ತದೆ.



## 8.8. ಕೇವಿಯಟ್:

ಕೇವಿಯಟ್ ಹುಡುಕಾಟವು ಹೆಚ್ಚಾಗಿ ಬಳಕೆಯಾಗುವ ಆಯ್ಕೆಯಾಗಿದೆ. ನ್ಯಾಯಾಲಯದಲ್ಲಿ ಯಾವುದೇ ವ್ಯಕ್ತಿ ಅಥವಾ ಆಸ್ತಿಯ ವಿರುದ್ಧ ಬಾಕಿ ಉಳಿದಿರುವ ಕೇವಿಯಟ್ ಅನ್ನು ತಿಳಿಯಲು ಈ ಆಯ್ಕೆಯನ್ನು ಬಳಸಬಹುದು.

**ಕೇವಿಯಟ್ ಮೂಲಕ ಹುಡುಕಲು**

→ ಪ್ರಕರಣದ ಸ್ಥಿತಿ ಕ್ಲಿಕ್ ಮಾಡಿ

→ ರಾಜ್ಯ, ಜಿಲ್ಲೆ ಆಯ್ಕೆಮಾಡಿ

→ ನ್ಯಾಯಾಲಯ ಸಂಕೀರ್ಣವನ್ನು ಆರಿಸಿ

→ ಹುಡುಕಾಟ ಪ್ರಕಾರವನ್ನು ಆಯ್ಕೆ ಮಾಡಿ


→ ಕೇವಿಯಟರ್ ಹೆಸರು ನಮೂದಿಸಿ

→ ಕೇವಿಯಟೀ ಹೆಸರು ನಮೂದಿಸಿ

→ ಹೋಗು ಬಟನ್ ಕ್ಲಿಕ್ ಮಾಡಿ

→ ಆಯ್ಕೆಗೆ ಹೊಂದುವ ಕೇವಿಯಟ್ ಗಳನ್ನು ಪ್ರದರ್ಶಿಸಲಾಗುತ್ತದೆ

→ ಕೇವಿಯಟ್ ಸಂಖ್ಯೆಯ ಮೇಲೆ ಕ್ಲಿಕ್ ಮಾಡಿದಾಗ ಪೂರ್ಣ ವಿವರಗಳನ್ನು ಪಡೆಯಬಹುದು.






## 8.9. ಪೂರ್ವಭಾವಿ ಅರ್ಜಿ ಸಂಖ್ಯೆಯ ಮೂಲಕ ಹುಡುಕುವುದು :

ಈ ಆಯ್ಕೆಯು ಮೊಬೈಲ್ ಅಪ್ಲಿಕೇಶನ್‌ನಲ್ಲಿ ಹೆಚ್ಚು ಬಳಕೆಯ ಮತ್ತು ತೃಪ್ತಿಕರವಾದ ಆಯ್ಕೆಯಾಗಿದೆ. ಹಿಂದಿನ ಆವೃತ್ತವು ಈ ಆಯ್ಕೆಯನ್ನು ಹೊಂದಿರಲಿಲ್ಲ. ಆದರೆ ಮೊಬೈಲ್ ಅಪ್ಲಿಕೇಶನ್‌ನಲ್ಲಿ ಜಾಮೀನು, ರಿಮಾಂಡ್ ವಿವರಗಳನ್ನು ಪಡೆಯಬಹುದೇ ಎಂಬ ಹಲವು ಬೇಡಿಕೆಯಿತ್ತು. ಹಾಗಾಗಿ ಈ ಆವೃತ್ತಿಯನ್ನು ಈ ಉಪಯುಕ್ತ ಆಯ್ಕೆಯೊಂದಿಗೆ ನವೀಕರಿಸಲಾಗಿದೆ. ನಿಮ್ಮ ಮೊಬೈಲ್ ಫೋನಿನ ಒಂದು ಕ್ಲಿಕ್ ನೊಂದಿಗೆ ಪೂರ್ವಭಾವಿ ಅರ್ಜಿ ವಿವರ, ಬಂಧನ, ಜಾಮೀನು ಇತರೆ ಮಾಹಿತಿಗಳನ್ನು ಪಡೆಯಬಹುದು.

### 8.9.1. ಜಾಮೀನು ಸ್ಥಿತಿಯನ್ನು ಹೇಗೆ ತಿಳಿಯುವುದು:

**ಜಾಮೀನು ಸ್ಥಿತಿ ತಿಳಿಯಲು**

→ ಪ್ರಕರಣದ ಸ್ಥಿತಿ ಕ್ಲಿಕ್ ಮಾಡಿ

→ ರಾಜ್ಯ, ಜಿಲ್ಲೆ ಆಯ್ಕೆಮಾಡಿ

→ ಪೂರ್ವ ವಿಚಾರಣಾ ಆಯ್ಕೆ ಮಾಡಿ

→ ನ್ಯಾಯಾಲಯ ಸಂಕೀರ್ಣವನ್ನು ಆರಿಸಿ

→ ಪೊಲೀಸ್ ಠಾಣೆ ಆಯ್ಕೆಮಾಡಿ


→ ಪ್ರ.ವ.ವ. ಸಂಖ್ಯೆ ಮತ್ತು ವರ್ಷ ನಮೂದಿಸಿ

→ ಜಾಮೀನು - ರೇಡಿಯೋ ಬಟನ್ ಆಯ್ಕೆಮಾಡಿ

→ ಹೋಗು ಬಟನ್ ಕ್ಲಿಕ್ ಮಾಡಿ

→ ಒಟ್ಟು ಪ್ರಕರಣಗಳ ಸಂಖ್ಯೆಯನ್ನು ಕ್ಲಿಕ್ ಮಾಡಿ

→ ಜಾಮೀನು ವಿವರಗಳನ್ನು ಪಡೆಯಬಹುದು.




**Bail Details**

| Sr.No | Accused Name | Application Date | Status | Next/Disposed Date | Result |
|---|---|---|---|---|---|
| 1 | Joga Singh | 27/08/2020 | Disposed | 27/08/2020 | GRANTED |

### 8.9.2. ರಿಮಾಂಡ್ ಸ್ಥಿತಿಯನ್ನು ಹೇಗೆ ತಿಳಿಯುವುದು:

ಯಾವುದೇ ವ್ಯಕ್ತಿಯನ್ನು ವಶಕ್ಕೆ ತೆಗೆದುಕೊಂಡು ಆತನನ್ನು ರಿಮಾಂಡ್ ಮಾಡಲಾಗಿದೆಯೇ ಇಲ್ಲವೇ ಎಂಬುದನ್ನು ತಿಳಿಯಲು ಬಯಸಿದರೆ ಈ ಆಯ್ಕೆಯನ್ನು ಬಳಸಬಹುದು. ಇದು ಬಂಧಿತ ವ್ಯಕ್ತಿಯ ಕುಟುಂಬದ ವಕೀಲರಿಗೆ ಬಹಳ ಉಪಯುಕ್ತವಾದುದು. ಅವರು ಎಫ್‌ಐಆರ್ ಸಂಖ್ಯೆಯನ್ನು ಬಳಸಿಕೊಂಡು ರಿಮಾಂಡ್ ಸ್ಥಿತಿಯನ್ನು ಪರಿಶೀಲಿಸಬಹುದು.

ಉದಾಹರಣೆಗೆ: ನಿರ್ದಿಷ್ಟ ಪೊಲೀಸ್ ಠಾಣೆಯಲ್ಲಿ - ಎಫ್‌ಐಆರ್ ಸಂಖ್ಯೆ 2672020 ರ ಅಡಿಯಲ್ಲಿ ಯಾವುದೇ ವ್ಯಕ್ತಿಯ ರಿಮಾಂಡ್ ಆಗಿದೆಯೇ ಎಂದು ತಿಳಿಯಬಹುದು. ರಿಮಾಂಡ್ ಫಲಿತಾಂಶವನ್ನು **ಪಿಸಿಆರ್** : ಪೊಲೀಸ್ ಕಸ್ಟಡಿ ರಿಮಾಂಡ್ ; **ಎಂಸಿಆರ್:** ಮ್ಯಾಜಿಸ್ಟೀರಿಯಲ್ ಕಸ್ಟಡಿ ರಿಮಾಂಡ್ ಪ್ರಕಾರ ತೋರಿಸಲಾಗುತ್ತದೆ.

**ಬಂಧನ ಸ್ಥಿತಿ ತಿಳಿಯಲು**

→ ಪ್ರಕರಣದ ಸ್ಥಿತಿ ಕ್ಲಿಕ್ ಮಾಡಿ

→ ರಾಜ್ಯ, ಜಿಲ್ಲೆ ಆಯ್ಕೆಮಾಡಿ

→ ಪೂರ್ವ ವಿಚಾರಣಾ ಆಯ್ಕೆ ಮಾಡಿ

→ ನ್ಯಾಯಾಲಯ ಸಂಕೀರ್ಣವನ್ನು ಆರಿಸಿ

→ ಪೊಲೀಸ್ ಠಾಣೆ ಆಯ್ಕೆಮಾಡಿ


→ ಪ್ರ.ವ.ವ. ಸಂಖ್ಯೆ ಮತ್ತು ವರ್ಷ ನಮೂದಿಸಿ

→ ರಿಮಾಂಡ್ - ರೇಡಿಯೋ ಬಟನ್ ಆಯ್ಕೆಮಾಡಿ

→ ಹೋಗು ಬಟನ್ ಕ್ಲಿಕ್ ಮಾಡಿ

→ ಒಟ್ಟು ಪ್ರಕರಣಗಳ ಸಂಖ್ಯೆಯನ್ನು ಕ್ಲಿಕ್ ಮಾಡಿ

→ ರಿಮಾಂಡ್ ವಿವರಗಳನ್ನು ಪಡೆಯಬಹುದು.




**Remand Details**

| Sr.No | Accused Name | Type | Days | From Date |
|---|---|---|---|---|
| 1 | Kashish @ Kannu | PCR | 2 | 07/09/2020 |
| 2 | Kashish @ Kannu | MCR | 14 | 09/09/2020 |
| 3 | Kashish @ Kannu | MCR | 14 | 23/09/2020 |

### 8.9.3. ಪೂರ್ವ ವಿಚಾರಣಾ ಅರ್ಜಿ ಸ್ಥಿತಿಯನ್ನು ಹೇಗೆ ತಿಳಿಯುವುದು:

ಕಳ್ಳತನದ ಸಂದರ್ಭದಲ್ಲಿ ಆಸ್ತಿಯನ್ನು ಮರುಪಡೆಯಲಾಗಿದ್ದರೆ ಹಾಗೂ ಪೂರ್ವ ವಿಚಾರಣಾ ಹಂತದಲ್ಲಿ ಆಸ್ತಿಯ ಮಾಲೀಕರು ಆಸ್ತಿಯ ಮಧ್ಯಂತರ ಪಾಲನೆಗಾಗಿ ಅರ್ಜಿ ದಾಖಲಿಸಿದ್ದರೆ, ಅಂತಹ ಅರ್ಜಿಗಳ ಸ್ಥಿತಿಯನ್ನು ಸಹ ಈ ಆಯ್ಕೆಯ ಮೂಲಕ ಪಡೆಯಬಹುದು.

**ಅರ್ಜಿ ಸ್ಥಿತಿ ತಿಳಿಯಲು**

ಪ್ರಕರಣದ ಸ್ಥಿತಿ ಕ್ಲಿಕ್ ಮಾಡಿ

→ ರಾಜ್ಯ, ಜಿಲ್ಲೆ ಆಯ್ಕೆಮಾಡಿ

→ ಪೂರ್ವ ವಿಚಾರಣಾ ಆಯ್ಕೆ ಮಾಡಿ

→ ನ್ಯಾಯಾಲಯ ಸಂಕೀರ್ಣವನ್ನು ಆರಿಸಿ

→ ಪೊಲೀಸ್ ಠಾಣೆ ಆಯ್ಕೆಮಾಡಿ

→ ಪ್ರ.ವ.ವ. ಸಂಖ್ಯೆ ಮತ್ತು ವರ್ಷ ನಮೂದಿಸಿ

→ ಅರ್ಜಿ - ರೇಡಿಯೋ ಬಟನ್ ಆಯ್ಕೆಮಾಡಿ

→ ಹೋಗು ಬಟನ್ ಕ್ಲಿಕ್ ಮಾಡಿ

→ ಒಟ್ಟು ಪ್ರಕರಣಗಳ ಸಂಖ್ಯೆಯನ್ನು ಕ್ಲಿಕ್ ಮಾಡಿ

→ ಅರ್ಜಿ ವಿವರಗಳನ್ನು ಪಡೆಯಬಹುದು.







## 9. ಇ-ಕೋರ್ಟ್ಸ್ ಗಳ ಮೊಬೈಲ್ ಆ್ಯಪ್ ಮೂಲಕ ವ್ಯಾಜ್ಯ ಪಟ್ಟಿ ಪಡೆಯುವುದು :

ಮೊಬೈಲ್ ಆ್ಯಪ್‌ನಲ್ಲಿ ವ್ಯಾಜ್ಯ ಪಟ್ಟಿಯನ್ನು ಪಡೆಯುವುದು ವಕೀಲರು, ದಾವೆ ಹೂಡುವವರು ಮತ್ತು ನ್ಯಾಯಾಧೀಶರಿಗೆ ಸಮಾನವಾಗಿ ಉಪಯುಕ್ತ ಆಯ್ಕೆಯಾಗಿದೆ. ಮೂರು ತರಹದ ವ್ಯಾಜ್ಯ ಪಟ್ಟಿ (i) ಯಾವುದೇ ನ್ಯಾಯಾಲಯದ ದಿವಾಣಿ ವ್ಯಾಜ್ಯ ಪಟ್ಟಿ (ii)ಯಾವುದೇ ನ್ಯಾಯಾಲಯದ ಅಪರಾಧಿಕ ವ್ಯಾಜ್ಯ ಪಟ್ಟಿ (iii) ವಕೀಲರ ಅನ್ವಯ ವ್ಯಾಜ್ಯ ಪಟ್ಟಿ , ಎಲ್ಲವನ್ನೂ ಇ-ಕೋರ್ಟ್ಸ್ ಗಳ ಮೊಬೈಲ್ ಆ್ಯಪ್ ನಲ್ಲಿ ಪಡೆಯಬಹುದಾಗಿದೆ.


ದಿವಾಣಿ ವ್ಯಾಜ್ಯ ಪಟ್ಟಿ ಮತ್ತು ಅಪರಾಧಿಕ ವ್ಯಾಜ್ಯ ಪಟ್ಟಿಯನ್ನು ಈ "ವ್ಯಾಜ್ಯ ಪಟ್ಟಿ" ಆಯ್ಕೆಯ ಅಡಿಯಲ್ಲಿ ವೀಕ್ಷಿಸಬಹುದು. ಪ್ರಕರಣದ ಸ್ಥಿತಿ ಹುಡುಕಾಟದ ಅಡಿಯಲ್ಲಿ ಲಭ್ಯವಿರುವ ವಕೀಲರ ಆಯ್ಕೆಯ ಮೂಲಕ ವಕೀಲರ ಅನ್ವಯ ವ್ಯಾಜ್ಯ ಪಟ್ಟಿಯನ್ನು ವೀಕ್ಷಿಸಬಹುದು,ಇದನ್ನು "ಪ್ರಕರಣದ ಸ್ಥಿತಿ ಆಯ್ಕೆಯನ್ನು ಬಳಸಿ ಹುಡುಕಿ" ಎಂಬ ವಿಷಯದ ಅಡಿಯಲ್ಲಿ ವಿವರಿಸಲಾಗಿದೆ. ವ್ಯಾಜ್ಯ ಪಟ್ಟಿ ಆಯ್ಕೆಯನ್ನು ಬಳಸುವುದರಿಂದ, ಒಬ್ಬ ವ್ಯಕ್ತಿಯು ತನ್ನ ಪ್ರಕರಣವನ್ನು ನಿರ್ದಿಷ್ಟ ದಿನದಲ್ಲಿ ಪೋಸ್ಟ್ ಮಾಡಲಾಗಿದೆಯೆ ಅಥವಾ ಇಲ್ಲವೇ ಎಂಬುದನ್ನು ಖಚಿತ ಪಡಿಸಿಕೊಳ್ಳಬಹುದು. ನ್ಯಾಯಾಧೀಶರು, ಸಿಬ್ಬಂದಿಗಳು, ವಕೀಲರಿಗೆ ಇದು ಉಪಯುಕ್ತ ಸಮಯ ನಿರ್ವಹಣಾ ಸಾಧನವಾಗಿದ್ದು, ಅದರ ಮೂಲಕ ಯಾವುದೇ ನಿರ್ದಿಷ್ಟ ದಿನದಲ್ಲಿ ಎಷ್ಟು ಪ್ರಕರಣಗಳನ್ನು ಪಟ್ಟಿಮಾಡಲಾಗಿದೆ ಎಂಬುದನ್ನು ಅರಿತು ದಿನದ ಕೆಲಸವನ್ನು ಯೋಜಿಸಬಹುದು ಮತ್ತು ಈ ಡೇಟಾವನ್ನು ಈಗ ಮೊಬೈಲ್ ಆ್ಯಪ್ ಮೂಲಕ ಹ್ಯಾಂಡ್‌ಸೆಟ್‌ಗಳಲ್ಲಿ ವೀಕ್ಷಿಸಬಹುದು.

**ವ್ಯಾಜ್ಯ ಪಟ್ಟಿ ಪಡೆಯಲು**

ವ್ಯಾಜ್ಯ ಪಟ್ಟಿ ಚಿಹ್ನೆಯನ್ನು ಒತ್ತಿ.
→ ರಾಜ್ಯ / ಜಿಲ್ಲೆ ಆಯ್ಕೆ ಮಾಡಿ.
→ ನ್ಯಾಯಾಲಯ ಸಂಕೀರ್ಣ ಆಯ್ಕೆ ಮಾಡಿ.
→ ನ್ಯಾಯಾಲಯದ ಹೆಸರು ಆಯ್ಕೆ ಮಾಡಿ.
→ ಕ್ಯಾಲೆಂಡರ್‌ನಿಂದ ವ್ಯಾಜ್ಯ ಪಟ್ಟಿ ದಿನಾಂಕವನ್ನು ಆಯ್ಕೆಮಾಡಿ
→ ದಿವಾಣಿ ಅಥವಾ ಅಪರಾಧಿಕ ಕ್ಲಿಕ್ ಮಾಡಿ, ಆಗ ದಿವಾಣಿ / ಅಪರಾಧಿಕ ವ್ಯಾಜ್ಯ ಪಟ್ಟಿ ಪ್ರದರ್ಶಿತವಾಗುತ್ತದೆ.
→ ಕಾರಣ ಪಟ್ಟಿಯಲ್ಲಿರುವ ನಿರ್ದಿಷ್ಟ ಪ್ರಕರಣಗಳನ್ನು ಹುಡುಕಾಟ ಪೆಟ್ಟಿಗೆ ಮೂಲಕವೂ ಹುಡುಕಬಹುದು.




## 10. ನನ್ನ ಪ್ರಕರಣಗಳ ಆಯ್ಕೆ :




ನನ್ನ ಪ್ರಕರಣಗಳ ಆಯ್ಕೆಯು ವಕೀಲರು ಮತ್ತು ದಾವೆ ಹೂಡುವವರಿಗೆ ಅತ್ಯಂತ ಆಕರ್ಷಕ ಮತ್ತು ಉಪಯುಕ್ತ ಆಯ್ಕೆಗಳಲ್ಲಿ ಒಂದಾಗಿದೆ ಏಕೆಂದರೆ ಇದು ಡಿಜಿಟಲ್ ವೈಯಕ್ತಿಕ ಪ್ರಕರಣ ಡೈರಿಯಂತೆ ಕಾರ್ಯ ನಿರ್ವಹಿಸುತ್ತದೆ. ಇದು ಇ-ಕೋರ್ಟ್ಸ್ ಆ್ಯಪ್‌ನಲ್ಲಿ ಲಭ್ಯವಿರುವ ವಿಶೇಷ ಲಕ್ಷಣವಾಗಿದೆ. ದಾವೆ ಹೂಡುವವರು ಅಥವಾ ವಕೀಲರು ಅವನ / ಅವಳ ಪ್ರಕರಣಗಳನ್ನು ನನ್ನ ಪ್ರಕರಣಗಳ ಅಡಿಯಲ್ಲಿ ಉಳಿಸಬಹುದು ಮತ್ತು ಸಂಗ್ರಹಿಸಿ ತಮಗೆ ಅಗತ್ಯವಿದ್ದಾಗ ವಿವರಗಳನ್ನು ನೋಡಬಹುದು.

### 10.1. "ನನ್ನ ಪ್ರಕರಣಗಳಿಗೆ" ಪ್ರಕರಣಗಳನ್ನು ಹೇಗೆ ಸೇರಿಸಬಹುದು:

ನೀವು "ನನ್ನ ಪ್ರಕರಣಗಳು" ಪಟ್ಟಿಗೆ ಪ್ರಕರಣಗಳನ್ನು ಸೇರಿಸಲು ಬಯಸಿದರೆ ಈ ಹಂತಗಳನ್ನು ಅನುಸರಿಸಿ.




**ಹಂತ 1:** ನಿಮಗೆ ಬೇಕಾದ ಪ್ರಕರಣವನ್ನು ಇ-ಕೋರ್ಟ್ಸ್ ಮೊಬೈಲ್ ಆ್ಯಪ ಬಳಸಿ ಹುಡುಕಿ.


**ಹಂತ 2:** ಸ್ಕ್ರೀನ್ ಶಾಟ್‌ನಲ್ಲಿ ತೋರಿಸಿದಂತೆ ಬಲಮೇಲ್ತುದಿಯಲ್ಲಿ ಪ್ರಕರಣ ಸೇರಿಸಿ ಎನ್ನುವ ಬಟನ್ ಕಾಣುತ್ತದೆ.

**ಹಂತ 3:** 'ಪ್ರಕರಣ ಸೇರಿಸಿ' ಬಟನ್ ಕ್ಲಿಕ್ ಮಾಡಿದರೆ ಹುಡುಕಿದ ಪ್ರಕರಣವು ನನ್ನ ಪ್ರಕರಣಗಳಿಗೆ ಸೇರುತ್ತದೆ

ವಕೀಲರು ಅಥವಾ ಸಹಾಯಕ ವಕೀಲರು ತಮ್ಮ ಕಚೇರಿಯ ಎಲ್ಲಾ ಪ್ರಕರಣಗಳನ್ನು "ನನ್ನ ಪ್ರಕರಣಗಳಲ್ಲಿ" ಸೇರಿಸಬಹುದು ಮತ್ತು ಅವರ ಕಚೇರಿ ಪ್ರಕರಣದ ಡಿಜಿಟಲ್ ದಿನಚರಿಯನ್ನು ನಿರ್ವಹಿಸಬಹುದು. ಪ್ರಕರಣಗಳ ನವೀಕರಣ ಮತ್ತು ಸ್ಥಿತಿಯನ್ನು ಪಡೆಯಬಹುದು. ಹಿರಿಯ ವಕೀಲರು ಪ್ರಮುಖ ಪ್ರಕರಣಗಳನ್ನು ತಾವೇ ಸೇರಿಸಬಹುದು ಮತ್ತು ಕಿರಿಯರ ಅಥವಾ ಸಹಾಯಕ ವಕೀಲರ ಸಹಾಯವಿಲ್ಲದೆ ಪ್ರಕರಣದ ಸ್ಥಿತಿಯನ್ನು ಗಮನದಲ್ಲಿರಿಸಿಕೊಳ್ಳಬಹುದು. ಪ್ರಕರಣದ ಸ್ಥಿತಿಯನ್ನು 24 * 7 ಕಾಲ ನೋಡಬಹುದು. ದಾವೆ ಹೂಡುವವನು, ಪ್ರಾಸಿಕ್ಯೂಟರ್‌ಗಳು, ಕೋರ್ಟ್ ಪೊಲೀಸ್ ಕಾನ್‌ಸ್ಟೆಬಲ್, ತನಿಖಾ ಅಧಿಕಾರಿಗಳು, ಸರ್ಕಾರಿ


ಅರ್ಜಿದಾರರು ಸಹ ಈ “ನನ್ನ ಪ್ರಕರಣಗಳು” ಪಟ್ಟಿಯನ್ನು ಬಳಸಬಹುದು ಮತ್ತು 24 * 7 ಅವುಗಳ ಮಾಹಿತಿ ಪಡೆಯಬಹುದು.

## 10.2. ನನ್ನ ಪ್ರಕರಣಗಳಿಂದ ಪ್ರಕರಣಗಳನ್ನು ಹೇಗೆ ತೆಗೆದುಹಾಕುವುದು :




"ನನ್ನ ಪ್ರಕರಣಗಳಿಂದ" ಪ್ರಕರಣಗಳನ್ನು ತೆಗೆಯಬೇಕಾದಲ್ಲಿ ಸದರಿ ಪ್ರಕರಣವನ್ನು ಆಯ್ಕೆ ಮಾಡಬೇಕು ಹಾಗೂ ಪಕ್ಕದ ಸ್ಕ್ರೀನ್ ಶಾಟ್‌ನಲ್ಲಿ ತೋರಿಸಿದಂತೆ ಬಲ ಮೇಲ್ತುದಿಯಲ್ಲಿ 'ಪ್ರಕರಣವನ್ನು ತೆಗೆದುಹಾಕಿ' ಆಯ್ಕೆ ಕಾಣುತ್ತದೆ. ಇದನ್ನು ಕ್ಲಿಕ್ ಮಾಡಿದರೆ ಸದರಿ ಪ್ರಕರಣವು ನನ್ನ ಪ್ರಕರಣಗಳ ಪಟ್ಟಿಯಿಂದ ಪ್ರಕರಣವನ್ನು ತೆಗೆದುಹಾಕುತ್ತದೆ.

## 10.3. ನನ್ನ ಪ್ರಕರಣಗಳಲ್ಲಿ ಹುಡುಕುವುದು :




"ನನ್ನ ಪ್ರಕರಣಗಳು" ಅಡಿಯಲ್ಲಿ ಒಬ್ಬರು ಹಲವಾರು ಪ್ರಕರಣಗಳನ್ನು ಹೊಂದಿರುವಾಗ ಅದನ್ನು "ನನ್ನ ಪ್ರಕರಣಗಳು" ಒಳಗೆ ಲಭ್ಯವಿರುವ ಹುಡುಕಾಟ ಆಯ್ಕೆಯನ್ನು ಬಳಸಿಕೊಂಡು ಹುಡುಕಬಹುದು. ಸ್ಕ್ರೀನ್‌ಶಾಟ್‌ನಲ್ಲಿ ತೋರಿಸಿರುವಂತೆ ಹುಡುಕಾಟ ಟ್ಯಾಬ್‌ನಲ್ಲಿ ಹೆಸರು ಅಥವಾ ಪ್ರಕರಣ ಸಂಖ್ಯೆ ಟೈಪ್ ಮಾಡುವ ಮೂಲಕ ಹುಡುಕಬಹುದು.

## 10.4. ರಿಫ್ರೆಶ್ (ಮರುಚೇತರಿಸು) ಬಟನ್ :

ರಿಫ್ರೆಶ್ ಬಟನ್ ಕ್ಲಿಕ್ ಮಾಡಿದರೆ 'ನನ್ನ ಪ್ರಕರಣಗಳು' ನವೀಕರಿಸುತ್ತವೆ. (ಅಪ್‌ಡೇಟ್ ಆಗುತ್ತವೆ). ಇಂದಿನ ಪ್ರಕರಣಗಳು ಆಯ್ಕೆಯ ಪಕ್ಕದಲ್ಲಿ ನವೀಕರಿಸುವ ಬಟನ್ ಇದ್ದು, ನನ್ನ ಪ್ರಕರಣಗಳಲ್ಲಿ ಸಂಗ್ರಹಿಸಿದ ಮಾಹಿತಿ ನವೀಕರಣ ಆಗುತ್ತದೆ. ಒಂದು ವೇಳೆ ಸಂಪರ್ಕದ ತೊಂದರೆ ಇದ್ದು ಪ್ರಕರಣ ನವೀಕರಣ ಆಗದೇ ಇದ್ದರೆ ಆ್ಯಪನಿಂದ “ಸಂಪರ್ಕ ದೋಷ” ತೊಂದರೆ ಎಂದು ತೋರಲ್ಪಡುತ್ತದೆ.




## 10.5. ನನ್ನ ಪ್ರಕರಣಗಳು - ದಿನಾಂಕವಾರು / ಜಿಲ್ಲಾವಾರು ಪ್ರದರ್ಶನ ಆಯ್ಕೆ:

ನವೀಕೃತ (ಅಪ್‌ಡೇಟೆಡ್) ಇ-ಕೋರ್ಟ್ಸ್ ಮೊಬೈಲ್ ಆ್ಯಪನಲ್ಲಿ ಜಿಲ್ಲಾವಾರು ಮತ್ತು ದಿನಾಂಕವಾರು ಆಯ್ಕೆಯಲ್ಲಿ ನನ್ನ ಪ್ರಕರಣಗಳು ತೋರುವ ಅವಕಾಶ ಇದೆ.

ಉದಾಹರಣೆಗೆ: ದಿನಾಂಕವಾರು ಆಯ್ಕೆ ಮಾಡಿದಲ್ಲಿ ಎಲ್ಲಾ ಪ್ರಕರಣಗಳು ದಿನಾಂಕದ ಪ್ರಕಾರ ತೋರ್ಪಡುತ್ತವೆ. ವಕೀಲರಿಗೆ ಅಥವಾ ಸಹಾಯಕ ವಕೀಲರಿಗೆ ಡಿಜಿಟಲ್ ಡೈರಿ ರೀತಿ ಈ ಆಯ್ಕೆ ಸೂಕ್ತವಾಗಿರುತ್ತದೆ. ಅದೇ ರೀತಿ ಜಿಲ್ಲಾವಾರು ಪ್ರದರ್ಶನ ಆಯ್ಕೆ ಸಹ ಲಭ್ಯವಿದೆ.


ದಿನಾಂಕವಾರು / ಜಿಲ್ಲಾವಾರು ಆಯ್ಕೆಯ ಸ್ಕ್ರೀನ್‌ಶಾಟ್ ಈ ಕೆಳಗಿನಂತೆ ಇರುತ್ತದೆ ಮತ್ತು ಪ್ರಕರಣ ಸಂಖ್ಯೆ ಕ್ಲಿಕ್ ಮಾಡಿದರೆ ಪ್ರಕರಣದ ಪೂರ್ಣ ವಿವರಗಳು ನನ್ನ ಪ್ರಕರಣಗಳ ಆಯ್ಕೆ ಮೂಲಕ ತೆರೆಯಲ್ಪಡುತ್ತವೆ.




### 10.6. ಕ್ಯಾಲೆಂಡರ್:

"ನನ್ನ ಪ್ರಕರಣಗಳನ್ನು" ಕ್ಯಾಲೆಂಡರ್ ಸ್ವರೂಪದಲ್ಲಿ ಸಹ ವೀಕ್ಷಿಸಬಹುದು. ಇದು ದಿನಾಂಕವಾರು ಬಾಕಿ ಉಳಿದಿರುವ ಪ್ರಕರಣಗಳ ಸಂಖ್ಯೆಯನ್ನು ತೋರಿಸುತ್ತದೆ. ಈ ಸಂಖ್ಯೆಯನ್ನು ಕ್ಲಿಕ್ ಮಾಡಿದಾಗ ಜಿಲ್ಲಾವಾರು ಬಾಕಿ ಉಳಿದಿರುವ ಪ್ರಕರಣಗಳ ವಿವರಗಳನ್ನು ತೋರುತ್ತದೆ.

ಉದಾಹರಣೆಗೆ : ಕ್ಯಾಲೆಂಡರ್‌ನಲ್ಲಿ ಸೆಪ್ಟೆಂಬರ್ 4 ರಂದು 3 ಪ್ರಕರಣಗಳನ್ನು ತೋರಿಸಲಾಗಿದೆ. ಇದನ್ನು ಕ್ಲಿಕ್ ಮಾಡಿದರೆ, ಪ್ರಕರಣಗಳು ಬಾಕಿ ಇರುವ ಜಿಲ್ಲೆ ತೋರಿಸುತ್ತದೆ.





ಈ ಸ್ಕ್ರೀನ್‌ಶಾಟ್‌ನಲ್ಲಿ ಅಹಮದಾಬಾದ್, ಗುಜರಾತ್ (1) ;

ಬಾರ್ಪೆಟಾ, ಅಸ್ಸಾಂ (1) ;

ಭಾವನಗರ, ಗುಜರಾತ್ (1) ಎಂದು ತೋರಿಸಲಾಗಿದೆ.


ಅಹಮದಾಬಾದ್, ಗುಜರಾತ್ (1) ಮೇಲೆ ಕ್ಲಿಕ್ ಮಾಡಿದಾಗ ಪ್ರಕರಣದ ವಿವರಗಳನ್ನು ತೋರಿಸುತ್ತದೆ.

## 11. ಬ್ಯಾಕಪ್ ಸೌಲಭ್ಯ





ಇ-ಕೋರ್ಟ್ಸ್ ಮೊಬೈಲ್ ಆ್ಯಪ್ ಬ್ಯಾಕಪ್ ಸೌಲಭ್ಯವನ್ನು ಒದಗಿಸುತ್ತದೆ. ಇದು ಇ-ಕೋರ್ಟ್ಸ್ ಅಪ್ಲಿಕೇಶನ್‌ನ ಹೆಚ್ಚು ಬೇಡಿಕೆಯ ವೈಶಿಷ್ಟ್ಯವಾಗಿದೆ. ರಫ್ತು ಮತ್ತು ಆಮದು ಆಯ್ಕೆಯ ಅಡಿಯಲ್ಲಿ ಮೊಬೈಲ್ ಸಾಧನದಲ್ಲಿ ಉಳಿಸಿದ ಪ್ರಕರಣಗಳನ್ನು ಬ್ಯಾಕಪ್ ಮಾಡಬಹುದು. ನಿಮ್ಮ ಮೊಬೈಲ್ ಅಪ್ಲಿಕೇಶನ್‌ನಲ್ಲಿ ನೀವು ಅನೇಕ ಪ್ರಕರಣಗಳನ್ನು ಉಳಿಸಿದ್ದರೆ ಮತ್ತು ನೀವು ಹೊಸ ಮೊಬೈಲ್ ಫೋನ್ ಪಡೆಯುತ್ತಿದ್ದರೆ ಈ ರಫ್ತು ಮತ್ತು ಆಮದು ಆಯ್ಕೆಯನ್ನು ಬಳಸಿ ಹೊಸ ಮೊಬೈಲ್ ಫೋನ್‌ನಲ್ಲಿ ಡೌನ್‌ಲೋಡ್ ಮಾಡಬಹುದು.

 ಮೆನು ಬಟನ್ ಕ್ಲಿಕ್ ಮಾಡುವ ಮೂಲಕ, ಈ ಬ್ಯಾಕಪ್ ಆಯ್ಕೆಯನ್ನು ಪ್ರವೇಶಿಸಬಹುದು. ಮೆನು ಬಟನ್ ಕ್ಲಿಕ್ ಮಾಡಿದಾಗ, ಸ್ಕ್ರೀನ್‌ಶಾಟ್‌ನಲ್ಲಿ ತೋರಿಸಿದಂತೆ ರಫ್ತು ಮತ್ತು ಆಮದು ಆಯ್ಕೆಯು ಮೆನುಗಳ ಅಡಿಯಲ್ಲಿ ಲಭ್ಯವಿದೆ. ಒಮ್ಮೆಯಾದರು ನಿಮ್ಮ ಪರಕರಣಗಳ ಪಟ್ಟಿಯನ್ನು ರಫ್ತು ಮಾಡಿಕೊಂಡು ಡೇಟಾವನ್ನು ಮೊಬೈಲ್ ಅಥವಾ ಗೂಗಲ್ ಡ್ರೈವ್ ಅಥವಾ ಇಮೇಲ್‌ನಲ್ಲಿ ನಿಯಮಿತವಾಗಿ ಇಡುವುದು ಅತ್ಯಗತ್ಯ. ನೀವು ಡೇಟಾವನ್ನು ರಫ್ತು ಮಾಡಿದಾಗ ಮಾತ್ರ, ಅಗತ್ಯವಿದ್ದಾಗ ಅದನ್ನು ಆಮದು ಮಾಡಿಕೊಳ್ಳಬಹುದು. ಉದಾಹರಣೆಗೆ: ಮೊಬೈಲ್ ಫೋನ್ ಬದಲಾಯಿಸುವಾಗ ಅಥವಾ ಆಕಸ್ಮಿಕ ಡೇಟಾ ನಷ್ಟವಾದಾಗ, ಆಮದು ಮಾಡಲು ಬಳಸಲಾಗುತ್ತದೆ. ನಿಮ್ಮ ಡೇಟಾವನ್ನು ನೀವು ರಫ್ತು ಮಾಡದ ಹೊರತು, ನೀವು ಅದನ್ನು ಆಮದು ಮಾಡಲು ಬಳಸಲಾಗುವುದಿಲ್ಲ. ಆದ್ದರಿಂದ ನಿಮ್ಮ ಡೇಟಾವನ್ನು ಮೊಬೈಲ್ ಫೋನ್‌ನಲ್ಲಿ ರಫ್ತು ಮಾಡಲು ಮರೆಯಬೇಡಿ.




### 11.1 ರಫ್ತು ಆಯ್ಕೆ:

ಮೊಬೈಲ್ ಅಪ್ಲಿಕೇಶನ್‌ನಲ್ಲಿ ಮೆನು ಪಟ್ಟಿಯ ಅಡಿಯಲ್ಲಿ ರಫ್ತು ಆಯ್ಕೆ ಲಭ್ಯವಿದೆ. ರಫ್ತು ಆಯ್ಕೆಯನ್ನು ಕ್ಲಿಕ್ ಮಾಡಿದಾಗ, ಕಡತಗಳನ್ನು ಎಲ್ಲಿ ರಫ್ತು ಮಾಡಬೇಕೆಂದು ಅದು ಕೇಳುತ್ತದೆ. ನಿಮ್ಮ ಕಡತಗಳನ್ನು ನೀವು ಇಮೇಲ್ ಅಥವಾ ಗೂಗಲ್ ಡ್ರೈವ್‌ನಲ್ಲಿ ಅಥವಾ ಫೋನ್‌ನಲ್ಲಿಯೇ ಸಂಗ್ರಹಿಸಬಹುದು ಅಥವಾ ರಫ್ತು ಮಾಡಬಹುದು ಅಥವಾ ಹಂಚಿಕೊಳ್ಳಬಹುದು. ನೀವು ಗೂಗಲ್ ಡ್ರೈವ್‌ನಲ್ಲಿ ಸಂಗ್ರಹಿಸುವಾಗ ಗೂಗಲ್ ನಿಂದ ಭದ್ರತಾ ಪ್ರಶ್ನೆಗಳನ್ನು ಪಡೆಯಬಹುದು. ಈ ಭದ್ರತಾ ಪ್ರಶ್ನೆಗಳನ್ನು ಒಪ್ಪಿಕೊಂಡ ನಂತರ ಬ್ಯಾಕಪ್ ಅನ್ನು ಗೂಗಲ್ ಡ್ರೈವ್‌ನಲ್ಲಿ ಸಂಗ್ರಹಿಸಲಾಗುವುದು. ಅಗತ್ಯವಿದ್ದಾಗ, ಗೂಗಲ್ ಡ್ರೈವ್‌ನಿಂದ ಬ್ಯಾಕಪ್ ಅನ್ನು ಹೊರ ತೆಗೆಯಬಹುದು.





ಸುಲಭವಾಗಿ ಅರ್ಥಮಾಡಿಕೊಳ್ಳಲು ಸ್ಕ್ರೀನ್‌ಶಾಟ್‌ನಲ್ಲಿ ತೋರಿಸಿದಂತೆ ಕಡತಗಳನ್ನು ರಫ್ತು ಮಾಡಲು ಕೆಳಗೆ ಹೇಳಲಾದ ಮೂರು ಆಯ್ಕೆಗಳು, ಅಂದರೆ

(I) ಇಮೇಲ್‌ನೊಂದಿಗೆ ಹಂಚಿಕೊಳ್ಳಿ;

(ii) ಡ್ರೈವ್ (ಗೂಗಲ್) ಗೆ ಉಳಿಸಿ;


(iii) ಈ ಸಾಧನದಲ್ಲಿ ಉಳಿಸಿ, ಅಂದರೆ ಮೊಬೈಲ್ ಫೋನ್‌ನಲ್ಲಿ ಉಳಿಸುವುದು.

ಈ ಮೂರು ಆಯ್ಕೆಗಳಲ್ಲಿ ಯಾವುದಾದರೂ ಒಂದನ್ನು ಬಳಸುವ ಮೂಲಕ, ನಿಮ್ಮ ಮೊಬೈಲ್ ಅಪ್ಲಿಕೇಶನ್‌ನಲ್ಲಿ ಸಂಗ್ರಹವಾಗಿರುವ ಡೇಟಾವನ್ನು ನೀವು ರಫ್ತು ಮಾಡಬಹುದು ಮತ್ತು ಅದನ್ನು .txt ಕಡತ ಸ್ವರೂಪದಲ್ಲಿ ಉಳಿಸಬಹುದು. ರಫ್ತು ಮಾಡಿದ ನಂತರ, ಇಲ್ಲಿ ತೋರಿಸಿರುವಂತೆ ಮೊಬೈಲ್‌ನಲ್ಲಿ "ಯಶಸ್ವಿಯಾಗಿ ಸೇರಿಸಲಾಗಿದೆ" ಎಂಬ ಎಚ್ಚರಿಕೆಯನ್ನು ಪಡೆಯುತ್ತೀರಿ. ಹೇಳಿದ .txt ಕಡತವನ್ನು ಮೊಬೈಲ್ ಸಂಗ್ರಹಣೆಯಿಂದ ಹೊರತೆಗೆಯಬಹುದು.



### 11.2. ಆಮದು ಆಯ್ಕೆ:

ಇ-ಕೋರ್ಟ್ಸ್ ಮೊಬೈಲ್ ಆ್ಯಪ್ ಬಳಕೆದಾರರಿಂದ ಆಮದು ಆಯ್ಕೆಯು ಹೆಚ್ಚು ಬೇಡಿಕೆಯ ವೈಶಿಷ್ಟ್ಯವಾಗಿದೆ. ನಿಮ್ಮ ಫೋನ್ ಬದಲಾಯಿಸಬೇಕು ಅಥವಾ ನಿಮ್ಮ ಫೋನ್ ಡೇಟಾ ಕ್ರ್ಯಾಶ್ ಆದಾಗ ಏನು ಮಾಡಬೇಕು? ಎಂದು ಯೋಚಿಸುತ್ತಿದ್ದರೆ, ಈ ಆಮದು ಆಯ್ಕೆಯು ಪ್ರಯೋಜನಕಾರಿಯಾಗಿದೆ. ಈ ಆಮದು ಆಯ್ಕೆಯನ್ನು ಬಳಸಿ ನಿಮ್ಮ ಹೊಸ ಫೋನ್‌ಗೆ ಬ್ಯಾಕಪ್ ಡೇಟಾವನ್ನು ಪಡೆಯಬಹುದು. ಒಂದು ವೇಳೆ ಫೋನ್‌ನಿಂದ ಡೇಟಾ ತಪ್ಪಾಗಿ ಅಳಿಸಿ ಹೋದಾಗ, ಆಮದು ಆಯ್ಕೆಯನ್ನು ಬಳಸಬಹುದು ಮತ್ತು ಡೇಟಾವನ್ನು ಮರುಸ್ಥಾಪಿಸಬಹುದು.




ಆಮದು ಐಕಾನ್ ಕ್ಲಿಕ್ ಮಾಡಿ ಎರಡು ಆಯ್ಕೆಗಳಿಂದ ಡೇಟಾವನ್ನು ಆಮದು ಮಾಡಿಕೊಳ್ಳಬಹುದು.

(i) ಡ್ರೈವ್‌ನಿಂದ ಆಮದು ಮಾಡಿ ;

(ii) ಈ ಸಾಧನದಿಂದ ಆಮದು ಮಾಡಿ.

ಸ್ಕ್ರೀನ್‌ಶಾಟ್‌ನಲ್ಲಿ ತೋರಿಸಿದಂತೆ "ಆಮದು" ಅಡಿಯಲ್ಲಿ ಎರಡು ಆಯ್ಕೆಗಳಿವೆ. ಒಮ್ಮೆಯಾದರೂ ಗೂಗಲ್ ಡ್ರೈವ್‌ನಿಂದ ಬ್ಯಾಕಪ್ ಡೇಟಾವನ್ನು ಆಮದು ಮಾಡಿ ಎಂದು ಸಲಹೆ ನೀಡುತ್ತಾರೆ. ಡೇಟಾವನ್ನು ಆಮದು ಮಾಡಲು ಗೂಗಲ್ ಡ್ರೈವ್ ಕೇಳುವ ಅನುಮತಿ ಪ್ರಶ್ನೆಗೆ ನೀವು ಅನುಮತಿಸು ಎಂದು ಕ್ಲಿಕ್ ಮಾಡಬೇಕು. ಆಮದು ಆಯ್ಕೆ ಪೂರ್ಣಗೊಂಡ ನಂತರ, ನೀವು "ಪ್ರಕರಣಗಳನ್ನು ಯಶಸ್ವಿಯಾಗಿ ಆಮದು ಮಾಡಲಾಗಿದೆ" ಎಂಬ ಎಚ್ಚರಿಕೆ ಸಂದೇಶವನ್ನು ಪಡೆಯುತ್ತೀರಿ. ಹೀಗಾಗಿ, ನೀವು ನಿಮ್ಮ ಹಳೆಯ ಮೊಬೈಲ್ ಫೋನ್‌ನಿಂದ ಬ್ಯಾಕಪ್ ಡೇಟಾವನ್ನು ಹೊಸ ಮೊಬೈಲ್ ಫೋನ್‌ಗೆ ಆಮದು ಮಾಡಿಕೊಳ್ಳಬಹುದು ಅಥವಾ ಪುನಃ ಸ್ಥಾಪಿಸಿಕೊಳ್ಳಬಹುದು.

## 12. ಕ್ಯೂಆರ್ ಕೋಡ್ ಬಳಸಿ ಪ್ರಕರಣದ ಸ್ಥಿತಿಯನ್ನುಪಡೆಯುವುದು:


ಇ-ಕೋರ್ಟ್ಸ್ ಸರ್ವೀಸಸ್ ಮೊಬೈಲ್ ಆ್ಯಪ್ ಬಳಸುವಾಗ ಪ್ರಕರಣದ ಸ್ಥಿತಿ ಪಡೆಯಲು ಅಥವಾ ಪ್ರಕರಣ ನವೀಕರಣಗಳನ್ನು ಪಡೆಯಲು ನೀವು ಬಯಸಿದಾಗಲೆಲ್ಲಾ ಪ್ರಕರಣ ಸಂಖ್ಯೆ ಅಥವಾ ಕೇಸ್ ನಂಬರ್ ರೆಕಾರ್ಡ್ (ಸಿಎನ್ಆರ್) ಸಂಖ್ಯೆಯನ್ನು ಟೈಪ್ ಮಾಡಲು ಕೆಲವರು ಕಷ್ಟಪಡಬಹುದು. ಇ-ಕೋರ್ಟ್ಸ್ ಮೊಬೈಲ್ ಆಪ್ ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಆಯ್ಕೆಯನ್ನು ಬಳಸಿಕೊಂಡು ಪ್ರಕರಣದ ವಿವರಗಳನ್ನು ಪಡೆಯುವ ಮತ್ತೊಂದು ಸುಲಭ ಮಾರ್ಗವಿದೆ.

### 12.1. ಹಂತ 1: ನಿಮ್ಮ ಪ್ರಕರಣದ ಕ್ಯೂಆರ್ ಕೋಡ್ ಪಡೆಯುವುದು:

ಇ-ಕೋರ್ಟ್ಸ್ ಸೇವೆಗಳ ಮೊಬೈಲ್ ಆ್ಯಪ್ ನ ಪ್ರಕರಣ ಇತಿಹಾಸದ ಅಡಿಯಲ್ಲಿ ಅಥವಾ ಇ-ಕೋರ್ಟ್ಸ್ ಸೇವೆಗಳ ವೆಬ್‌ಸೈಟ್ **https://ecourts.gov.in** ನ ಪ್ರಕರಣ ಇತಿಹಾಸದ ಅಡಿಯಲ್ಲಿ ನಿಮ್ಮ ಪ್ರಕರಣದ ಕ್ಯೂಆರ್ ಕೋಡ್ ಪಡೆಯಿರಿ.

### 12.2. ಹಂತ 2: ಕ್ಯೂಆರ್ ಕೋಡ್ ಮುದ್ರಿಸಿ ಅದನ್ನು ಡಾಕೆಟ್ ನಲ್ಲಿ ಅಂಟಿಸುವುದು :


ಕ್ಯೂಆರ್ ಕೋಡ್‌ನ ಮುದ್ರಣವನ್ನು ತೆಗೆದುಕೊಂಡು ಅದನ್ನು ಪ್ರಕರಣದ ಕಡತಗಳಲ್ಲಿ ಅಂಟಿಸಬಹುದು.




### 12.3. ಹಂತ 3: ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ :


ಇ-ಕೋರ್ಟ್ಸ್ ಮೊಬೈಲ್ ಆ್ಯಪ್ ನಲ್ಲಿ ಅಂತರ್ಗತವಾಗಿರುವ "ಸ್ಕ್ಯಾನ್ ಕ್ಯೂಆರ್ ಕೋಡ್" ಆಯ್ಕೆಯನ್ನು ಬಳಸುವುದರಿಂದ ಪ್ರಕರಣದ ಡಾಕೆಟ್‌ನಲ್ಲಿ ಅಂಟಿಸಲಾದ ಕ್ಯೂಆರ್ ಕೋಡ್ ಅನ್ನು ಸ್ಕ್ಯಾನ್ ಮಾಡಿ ತಕ್ಷಣವೇ ಪ್ರಕರಣದ ಸ್ಥಿತಿಯನ್ನು ಪಡೆಯಬಹುದು. ಈ ಕ್ಯೂಆರ್ ಕೋಡ್ ಸ್ಕ್ಯಾನಿಂಗ್ ಸೌಲಭ್ಯವು ಹೆಚ್ಚಿನ ಸಂಖ್ಯೆಯ ಪ್ರಕರಣಗಳನ್ನು ಹೊಂದಿರುವ ವಕೀಲರ ಕಚೇರಿ, ಕಂಪನಿಗಳು ಹಾಗೂ ಸರ್ಕಾರಿ ಸಂಸ್ಥೆಗಳಿಗೆ ಪ್ರಯೋಜನಕಾರಿಯಾಗಿದೆ. ಅವರು ಕ್ಯೂಆರ್ ಕೋಡ್‌ನ ಮುದ್ರಣವನ್ನು ತಮ್ಮ ಪ್ರಕರಣದ ಕಡತಗಳಲ್ಲಿ ಅಂಟಿಸಬಹುದು ಮತ್ತು ಎಲ್ಲಾ ವಿವರಗಳನ್ನು ಪುನಃ ನಮೂದಿಸದೆ ಕೇವಲ ಅವರ ಮೊಬೈಲ್ ಆಪ್-ಸ್ಕ್ಯಾನ್ ಕ್ಯೂಆರ್ ಕೋಡ್ ಆಯ್ಕೆಯೊಂದಿಗೆ ಸ್ಕ್ಯಾನ್ ಮಾಡಿ ಪ್ರಕರಣದ ವಿವರಗಳನ್ನು ತ್ವರಿತವಾಗಿ ಪಡೆಯಬಹುದು.

## 13 ಇಂಟರ್ನೆಟ್ ಸೌಲಭ್ಯ ಇಲ್ಲದಿದ್ದಾಗ ಎಸ್.ಎಂ.ಎಸ್. ಮೂಲಕ ಪ್ರಕರಣದ ಸ್ಥಿತಿಯನ್ನು ಪಡೆಯುವುದು:




ನಮ್ಮ ದೇಶದಲ್ಲಿ, 50% ಕ್ಕಿಂತ ಹೆಚ್ಚು ಜನರು ಇಂಟರ್ನೆಟ್ ಅವಕಾಶವನ್ನು ಹೊಂದಿಲ್ಲ. ಇ-ಸಮಿತಿಯ ಅಧ್ಯಕ್ಷರು ಪುನರಾವರ್ತಿಸಿದಂತೆ ನಾವು ತಾಂತ್ರಿಕ ವಿಭಜನೆಯನ್ನು ಭೇಧಿಸಬಹುದಾದ ಒಂದು ವ್ಯವಸ್ಥೆಯನ್ನು ಹೊಂದಿರಬೇಕು ಮತ್ತು ಈ ಸೇವೆಯು ಅಂತರ್ಜಾಲದ ಸೌಲಭ್ಯವನ್ನು ಹೊಂದಿರದ ಜನರ ಅಗತ್ಯವನ್ನು ಪೂರೈಸುವ ಒಂದು ವೈಶಿಷ್ಟ್ಯವಾಗಿದೆ. ನೀವು ಇಂಟರ್ನೆಟ್ ಸಂಪರ್ಕವನ್ನು ಹೊಂದಿರದಿದ್ದಾಗ, **9766899899** ಗೆ **ECOURTS <SPACE>** <ನಿಮ್ಮ ಸಿಎನ್‌ಆರ್ ಸಂಖ್ಯೆ> ಸಂದೇಶ ಕಳುಹಿಸುವ ಮೂಲಕ ಪ್ರಕರಣದ ಸ್ಥಿತಿಯನ್ನು ಪಡೆಯಬಹುದು.

## 14. ಇ-ಕೋರ್ಟ್ಸ್ ಸ್ವಯಂ ಚಾಲಿತ ಇ-ಮೇಲ್ ಸೇವೆಯ ಮೂಲಕ ಪ್ರಕರಣದ ಸ್ಥಿತಿಯನ್ನು ಪಡೆಯುವುದು:




ಸ್ವಯಂಚಾಲಿತ ಇಮೇಲ್ ಸೇವೆಗಳ ಸೌಲಭ್ಯವು ಇ-ಕೋರ್ಟ್ಸ್ ಮೊಬೈಲ್ ಆ್ಯಪ್ ಗೆ ಹೊರತಾಗಿದ್ದರೂ, ಮೊಬೈಲ್ ಫೋನ್‌ನಲ್ಲಿಯೇ ಇಮೇಲ್‌ಗಳನ್ನು ಪರಿಶೀಲಿಸುವ ಅಭ್ಯಾಸವಿರುವವರಿಗೆ ಇದೊಂದು ಉತ್ತಮವಾದ ವೈಶಿಷ್ಟ್ಯವಾಗಿದೆ. ಇ-ಕೋರ್ಟ್ಸ್ ಯೋಜನೆಯು ಇತ್ತೀಚೆಗೆ ಪ್ರಾರಂಭಿಸಿದ ಸ್ವಯಂಚಾಲಿತ ಇಮೇಲ್ ಸೇವೆಗಳ ಮೂಲಕ ದಾವೆದಾರರು ಮತ್ತು ವಕೀಲರಿಗೆ ಇಮೇಲ್‌ಗಳನ್ನು ಕಳುಹಿಸಲು ಪ್ರಾರಂಭಿಸಿದೆ. ನೋಂದಾಯಿತ ಬಳಕೆದಾರರಿಗೆ ಪ್ರಕರಣ ನವೀಕರಣಗಳು, ಮುಂದಿನ ವಿಚಾರಣೆಯ ದಿನಾಂಕಗಳು, ಆದೇಶಗಳು, ತೀರ್ಪುಗಳ ಪ್ರತಿಗಳು ಮತ್ತು ವ್ಯಾಜ್ಯ ಪಟ್ಟಿಯನ್ನು ಕಳುಹಿಸಲಾಗುತ್ತದೆ. ಈ ಆಕರ್ಷಕ ಸ್ವಯಂಚಾಲಿತ ಇಮೇಲ್ ಸೇವೆಯನ್ನು ಸಕ್ರಿಯಗೊಳಿಸಲು, ದಾವೆ ಹೂಡುವವರು ಮತ್ತು ವಕೀಲರು ತಮ್ಮ ಇಮೇಲ್ ಅನ್ನು ಸಂಬಂಧಪಟ್ಟ ನ್ಯಾಯಾಲಯದಲ್ಲಿ ನೋಂದಾಯಿಸಿಕೊಳ್ಳಬೇಕು. ಮನೆಯಿಂದ ಆರಾಮವಾಗಿ ನ್ಯಾಯಾಲಯದಿಂದ ಎಲ್ಲಾ ದೃಢೀಕೃತ ಪ್ರತಿಗಳನ್ನು ಪಡೆಯುವ ದಿನ ದೂರವಿಲ್ಲ.

ಅವಿನಾಶಿ ಅಧೀನ ನ್ಯಾಯಾಲಯದಲ್ಲಿ ಅಭ್ಯಾಸ ಮಾಡುತ್ತಿದ್ದ ವಕೀಲರೊಬ್ಬರು ತಮ್ಮ ಪ್ರಕರಣದ ಪಟ್ಟಿಗೆ ಸಂಬಂಧಿಸಿದಂತೆ ಸ್ವಯಂಚಾಲಿತ ಇಮೇಲ್ ಸ್ವೀಕರಿಸಿದ ತನ್ನ ಉತ್ಸಾಹ ಮತ್ತು ಆಶ್ಚರ್ಯವನ್ನು ಸಂತೋಷದಿಂದ ಹಂಚಿಕೊಂಡರು. ಇದನ್ನು ಓದುಗರಿಗಾಗಿ ಇಲ್ಲಿ ಹಂಚಿಕೊಳ್ಳಲಾಗಿದೆ.

## 15. ನ್ಯಾಯಾಲಯ ಸಂಕೀರ್ಣ ಲೊಕೇಟರ್:




ಹೊಸ ಆಯ್ಕೆ - ಇ-ಕೋರ್ಟ್ಸ್ ಮೊಬೈಲ್ ಆ್ಯಪ್ ನಲ್ಲಿ ಕೋರ್ಟ್ ಕಾಂಪ್ಲೆಕ್ಸ್ ಲೊಕೇಟರ್ ಅನ್ನು ಸೇರಿಸಲಾಗಿದೆ. ಇದು ದಾವೆ ಹೂಡುವವರಿಗೆ ಸೂಕ್ತವಾದ ಸಾಧನವಾಗಿದೆ. ದಾವೆದಾರರು ದೂರದ ನ್ಯಾಯಾಲಯಗಳಿಂದ ಸಮನ್ಸ್ ಪಡೆದರೆ ಮತ್ತು ನ್ಯಾಯಾಲಯದ ಸ್ಥಳದ ಬಗ್ಗೆ ತಿಳಿದಿಲ್ಲದಿದ್ದರೆ, ಅವರು ಕೋರ್ಟ್ ಕಾಂಪ್ಲೆಕ್ಸ್ ಲೊಕೇಟರ್ ಅನ್ನು ಬಳಸಿಕೊಂಡು ನಕ್ಷೆಯಲ್ಲಿ ನ್ಯಾಯಾಲಯದ ಸ್ಥಳವನ್ನು ಕಂಡುಹಿಡಿಯಬಹುದು ಹಾಗೂ ನ್ಯಾಯಾಲಯವನ್ನು ತಲುಪಬಹುದು. ಈ ಕೋರ್ಟ್ ಕಾಂಪ್ಲೆಕ್ಸ್ ಲೊಕೇಟರ್ ನಮ್ಮ ಇಂಡಿಯನ್ ಮ್ಯಾಪಿಂಗ್ ಆ್ಯಪ್ - "ಭುವನ್" ನಿಂದ ಕಾರ್ಯ ನಿರ್ವಹಿಸುತ್ತದೆ. ಸ್ಕ್ರೀನ್‌ಶಾಟ್ ನಲ್ಲಿ ಕೊಯಮತ್ತೂರಿನಲ್ಲಿಯ ಕೋರ್ಟ್ ಹುಡುಕುವುದನ್ನು ತೋರಿಸಲಾಗಿದೆ.

## 16. ಇ-ಕೋರ್ಟ್ಸ್ ಮೊಬೈಲ್ ಆಪ್ ಮೆನುವಿನಲ್ಲಿರುವ ವಿವಿಧ ಲಿಂಕ್‌ಗಳು:





ಇ-ಕೋರ್ಟ್ಸ್ ಮೊಬೈಲ್ ಆ್ಯಪ್ ನಲ್ಲಿ ಇ-ಕೋರ್ಟ್ಸ್ ಸೇವೆಗಳ ಪ್ರಮುಖ ಲಿಂಕ್‌ಗಳನ್ನು ಸಹ ಒದಗಿಸಲಾಗಿದೆ. ಮೆನು ಆಯ್ಕೆ ಅಡಿಯಲ್ಲಿ ಈ ಕೆಳಗಿನ ಲಿಂಕ್‌ಗಳನ್ನು ಪಡೆಯಬಹುದು.

- → **ಇ-ಪೇ**
- → **ಎನ್‌ಜೆಡಿಜಿ**
- → **ಇ-ಫೈಲಿಂಗ್**
- → **ಇಂಡಿಯಾ ಕೋಡ್**
- → **ವಕೀಲರ ಫಾರ್ಮ್‌ಗಳು**
- → **ವರ್ಚುವಲ್ ಕೋರ್ಟ್‌ಗಳು**

ಈ ಎಲ್ಲಾ ಲಿಂಕ್‌ಗಳು ಇ-ಕೋರ್ಟ್ಸ್ ಸೇವೆಗಳ ವೆಬ್‌ಸೈಟ್ ನಲ್ಲಿ ಲಭ್ಯವಿದೆ. ಉದಾಹರಣೆಗೆ: ಯಾರಾದರು ಆನ್‌ಲೈನ್ ನಲ್ಲಿ ದಂಡ ಪಾವತಿಸಲು ಬಯಸಿದರೆ, ಮೊಬೈಲ್‌ನಿಂದ ನೇರವಾಗಿ ವರ್ಚುವಲ್ ಕೋರ್ಟ್‌ಗಳ ಲಿಂಕ್ ಕ್ಲಿಕ್ ಮಾಡಬಹುದು. ವರ್ಚುವಲ್ ಕೋರ್ಟ್ ಪೋರ್ಟಲ್ ನಿಂದ ನ್ಯಾಯಾಲಯಗಳಿಗೆ ಹೋಗದೆ ದಂಡ ಪಾವತಿಸಬಹುದು. ಆದ್ದರಿಂದ ಈ ಲಿಂಕ್‌ಗಳನ್ನು ನೈಜವಾಗಿ ಸಿದ್ಧ ಉಲ್ಲೇಖಗಳಾಗಿ ಬಳಸಬಹುದು !

## 17. ಇ-ಕೋರ್ಟ್ಸ್ ಮೊಬೈಲ್ ಆಪ್ ನಲ್ಲಿ ಇ-ಪೇ ಲಿಂಕ್:

ನೀವು ಇ-ಪೇ ಆಯ್ಕೆಯನ್ನು ಕ್ಲಿಕ್ ಮಾಡಿದಾಗ, ಅದು ನಿಮ್ಮನ್ನು https://pay.ecourts.gov.in ಗೆ ಕರೆದೊಯ್ಯುತ್ತದೆ. ನ್ಯಾಯಾಲಯದ ಶುಲ್ಕಗಳು, ನ್ಯಾಯಾಂಗ ಠೇವಣಿ, ದಂಡ ಅಥವಾ ಜುಲ್ಮಾನೆಯನ್ನು ಡಿಜಿಟಲ್ ಪಾವತಿ ಮಾಡಬಹುದು. ಸಿಎನ್ಆರ್ ಸಂಖ್ಯೆ ಅಥವಾ ಪ್ರಕರಣ ಸಂಖ್ಯೆ ಅಥವಾ ಮೊಬೈಲ್ ಸಂಖ್ಯೆಯನ್ನು ಬಳಸಿಕೊಂಡು ನೀವು ಡಿಜಿಟಲ್ ಪಾವತಿಗಳನ್ನು ಮಾಡಬಹುದು.




## 18. ಇ-ಕೋರ್ಟ್ಸ್ ಮೊಬೈಲ್ ಆ್ಯಪ್ ನಲ್ಲಿ ಎನ್‌ಜೆಡಿಜಿ ಲಿಂಕ್:


ನೀವು ಎನ್‌ಜೆಡಿಜಿ ಆಯ್ಕೆಯನ್ನು ಕ್ಲಿಕ್ ಮಾಡಿದಾಗ ಅದು ನಿಮ್ಮನ್ನು ನೇರವಾಗಿ http://njdg.ecourts.gov.in ಗೆ ಕರೆದೊಯ್ಯುತ್ತದೆ. ನೀವು ಕೆಳಗಿನ ವಿವರಗಳನ್ನು ಅಲ್ಲಿಂದ ಪಡೆಯಬಹುದು.

- ನ್ಯಾಶನಲ್ ಜುಡಿಶಿಯಲ್ ಡೇಟಾ ಗ್ರಿಡ್ (ಜಿಲ್ಲಾ ಮತ್ತು ತಾಲ್ಲೂಕು ನ್ಯಾಯಾಲಯ)
- ನ್ಯಾಶನಲ್ ಜುಡಿಶಿಯಲ್ ಡೇಟಾ ಗ್ರಿಡ್ (ಮಾನ್ಯ ಉಚ್ಚ ನ್ಯಾಯಾಲಯ)

ಎನ್‌ಜೆಡಿಜಿಯನ್ನು ಬಳಸುವಾಗ ನೀವು ರಾಜ್ಯ ಮತ್ತು ಜಿಲ್ಲೆಯನ್ನು ಆಯ್ಕೆ ಮಾಡಬೇಕಾಗುತ್ತದೆ. ಡ್ರಿಲ್ ಡೌನ್ ಆಯ್ಕೆ ಬಳಸುವ ಮೂಲಕ ಬಾಕಿ ಇರುವ ಪ್ರಕರಣ, ವಿಲೇವಾರಿಯಾದ ಪ್ರಕರಣ, ಪ್ರಕರಣದ ಪ್ರಕಾರ ಹಾಗೂ ಯಾವ ಹಂತದಲ್ಲಿದೆ ಎಂಬುದನ್ನು ತಿಳಿಯಬಹುದು. ಡ್ರಿಲ್ ಡೌನ್ ಆಯ್ಕೆಯನ್ನು ಅನುಭವಿಸಲು ನಿಮ್ಮ ಮೊಬೈಲ್ ನ್ನು ಬಳಸಿ.

| National Judicial Data Grid (District and Taluka Courts) | National Judicial Data Grid (High Courts) |
|---|---|
|  |  |

## 19. ಇ-ಕೋರ್ಟ್ಸ್ ಮೊಬೈಲ್ ಆಪ್ ನ ಮೂಲಕ ಇಂಡಿಯಾ ಕೋಡ್ ಪ್ರವೇಶಿಸುವುದು:





ಈಗ ಇ-ಕೋರ್ಟ್ಸ್ ಮೊಬೈಲ್ ಆಪ್ ಗೆ ಇಂಡಿಯಾ ಕೋಡ್‌ನ ಹೊಸ ವೈಶಿಷ್ಟ್ಯವನ್ನು ಸೇರಿಸಲಾಗಿದೆ. ಆ ಮೂಲಕ ಅದನ್ನು ಬಳಸುವವರು ಎಲ್ಲಾ ಕಾನೂನುಗಳು, ಕಾಯಿದೆಗಳು, ನಿಯಮಗಳು, ಅಧಿಸೂಚನೆ ಇತ್ಯಾದಿಗಳನ್ನು ಪಡೆಯಬಹುದು. ಇದು ನಿಮ್ಮ ಹ್ಯಾಂಡ್‌ಸೆಟ್‌ನಲ್ಲಿರುವ ಎಲ್ಲಾ ಬೇರ್ ಕಾಯಿದೆಗಳ ಉತ್ತಮ ಸಿದ್ಧ ಉಲ್ಲೇಖನವಾಗಿದೆ. ಉದಾಹರಣೆಗೆ: ನೀವು ಸಿಪಿಸಿಯಲ್ಲಿ ಯಾವುದೇ ವಿಭಾಗವನ್ನು ಉಲ್ಲೇಖಿಸಲು ಬಯಸಿದರೆ, ಅದನ್ನು ಇಲ್ಲಿ ತೋರಿಸಿರುವಂತೆ ಮೊಬೈಲ್ ಅಪ್ಲಿಕೇಶನ್ ಲಿಂಕ್‌ನಿಂದ ಸುಲಭವಾಗಿ ಪಡೆಯಬಹುದು.

### 19.1. ಇಂಡಿಯಾ ಕೋಡ್ ನಿಂದ ಬೇರ್ ಕಾಯಿದೆಗಳನ್ನು ಹುಡುಕುವುದು:

ನೀವು ಯಾವುದೇ ಶಾಸನವನ್ನು ಹುಡುಕಲು ಬಯಸಿದರೆ, ಅದನ್ನು ಹುಡುಕಾಟ ಬಾಕ್ಸ್ ನಲ್ಲಿ ನಮೂದಿಸಿ ಅದರ ಸಂಪೂರ್ಣ ವಿವರವನ್ನು ಇಂಡಿಯಾ ಕೋಡ್‌ನಿಂದ ಪಡೆಯಬಹುದು. ಉದಾಹರಣೆಗೆ: ಕ್ರಿಮಿನಲ್ ಕಾರ್ಯವಿಧಾನದ ಮಾಹಿತಿ ಬಯಸಿದರೆ, ಬಾಕ್ಸ್ ನಲ್ಲಿ ನಮೂದಿಸಿ ವಿವರವನ್ನು ಪಡೆಯಬಹುದು.




## 20. ಇ-ಕೋರ್ಟ್ಸ್ ಮೊಬೈಲ್ ಆಪ್ ನಲ್ಲಿ ಇ-ಫೈಲಿಂಗ್ ಲಿಂಕ್:




ನೀವು ಇ-ಫೈಲಿಂಗ್ ಅಪ್ಲಿಕೇಶನ್ ಅನ್ನು ಕ್ಲಿಕ್ ಮಾಡಿದಾಗ, ಅದು ನಿಮ್ಮನ್ನು ಇ-ಫೈಲಿಂಗ್ ಪೋರ್ಟಲ್ https://efiling.ecourts.gov.in ಗೆ ಕರೆದೊಯ್ಯುತ್ತದೆ. ಭಾರತ ನಕ್ಷೆಯಿಂದ, ನಿಮ್ಮ ರಾಜ್ಯವನ್ನು ಆಯ್ಕೆ ಮಾಡಿಕೊಳ್ಳಬಹುದು ಮತ್ತು ಪ್ರಕರಣವನ್ನು ಇ-ಫೈಲಿಂಗ್ ಮಾಡಲು ಪ್ರಾರಂಭಿಸಬಹುದು. ಇ-ಫೈಲಿಂಗ್ ಪೋರ್ಟಲ್ ಅಡಿಯಲ್ಲಿ ಒದಗಿಸಲಾದ ಸಹಾಯ ವೀಡಿಯೊಗಳು ಮತ್ತು ಟ್ಯುಟೋರಿಯಲ್ ಗಳನ್ನು ಸಹ ನೋಡಬಹುದು. ನಿಮ್ಮ ಪ್ರಕರಣಗಳನ್ನು ಇ-ಫೈಲಿಂಗ್ ಮಾಡಲು ಪ್ರಾರಂಭಿಸಿ ಹಾಗೂ ಡಿಜಿಟಲ್ ಯುಗದ ವಕೀಲರಾಗಬಹುದು.

## 21. ಇ-ಕೋರ್ಟ್ಸ್ ಮೊಬೈಲ್ ಅಪ್ಲಿಕೇಶನ್‌ನಲ್ಲಿ ವರ್ಚುವಲ್ ಕೋರ್ಟ್‌ಗಳ ಲಿಂಕ್:

ಮೊಬೈಲ್ ಆಪ್ ನಲ್ಲಿನ ಲಿಂಕ್ ಮೂಲಕ ವರ್ಚುವಲ್ ಕೋರ್ಟ್ ಪೋರ್ಟಲ್ ಗೆ ಪ್ರವೇಶಿಸಬಹುದು. ವರ್ಚುವಲ್ ಕೋರ್ಟ್ ಪೋರ್ಟಲ್‌ನಲ್ಲಿ ನೀಡಲಾಗಿರುವ ಸೇವೆಗಳಲ್ಲಿ ಮೊಬೈಲ್ ಸಂಖ್ಯೆ, ಸಿಎನ್‌ಆರ್, ಪಕ್ಷಗಾರರ ಹೆಸರು, ಚಲನ್ ಸಂಖ್ಯೆ ಮತ್ತು ವಾಹನ ಸಂಖ್ಯೆಯ ಮೂಲಕ ದಂಡ ಪಾವತಿ ಮಾಡಬಹುದು. ಹೀಗೆ ನ್ಯಾಯಾಲಯಕ್ಕೆ ಹೋಗದೆ ಮೊಬೈಲ್ ಆಪ್ ನಲ್ಲಿನ ವರ್ಚುವಲ್ ಕೋರ್ಟ್ ಲಿಂಕ್‌ನಿಂದ ಮೋಟಾರು ಅಪಘಾತ ಪ್ರಕರಣಗಳಲ್ಲಿ ದಂಡವನ್ನು ಪಾವತಿಸಿ ತನ್ನ ಪ್ರಕರಣವನ್ನು ಇತ್ಯರ್ಥ ಪಡಿಸಬಹುದು.



## 22. ಇ-ಕೋರ್ಟ್ಸ್ ಮೊಬೈಲ್ ಅಪ್ಲಿಕೇಶನ್‌ನಲ್ಲಿ ವಕೀಲರ ಫಾರ್ಮ್‌ಗಳು:


ಇ-ಕೋರ್ಟ್ಸ್ ಮೊಬೈಲ್ ಆಪ್ ನಲ್ಲಿ ವಕೀಲರ ಫಾರ್ಮ್‌ಗಳು ಎಂಬ ಹೊಸ ಆಯ್ಕೆ ಸೇರ್ಪಡೆಯಾಗಿದೆ. ಈ ಲಿಂಕ್ ಅನ್ನು ಕ್ಲಿಕ್ ಮಾಡಿದರೆ ವಕೀಲರಿಗೆ ಅನುಕೂಲವಾಗುವ ವಿವಿಧ ಫಾರ್ಮ್ ಗಳು ಲಭ್ಯವಿದೆ.

ಉದಾಹರಣೆ: ಜಾಮೀನು ಬಾಂಡ್, ನಕಲು ಅರ್ಜಿ, ಪ್ರಕರಣ ಮಾಹಿತಿ ನಮೂನೆ, ದಾಖಲಾತಿ ನಮೂನೆ, ಸೂಚ್ಯಂಕ ನಮೂನೆ, ಮೆಮೊ ಆಫ್ ಅಪಿಯರೆನ್ಸ್, ದಾಖಲೆ ಹಾಜರು ಪಡಿಸಲು ನೋಟಿಸ್, ಜಾಮೀನು ಬಾಂಡ್, ವಕಾಲತ್ ನಾಮಾ ಬಾಂಡ್ ಇತರೆ. ಈ ಉಪಯುಕ್ತ ಲಿಂಕ್ ಅನ್ನು ಪರಿಶೀಲಿಸಲು ನಿಮಗೆ ಸಾಕಷ್ಟು ಕುತೂಹಲವಿದೆ ಎಂದು ಭಾವಿಸುತ್ತೇವೆ.



## 23. ಸಹಾಯ ಆಯ್ಕೆ :

ಇ-ಕೋರ್ಟ್ಸ್ ಸೇವೆಗಳ ಅಡಿಯಲ್ಲಿ ವಿವಿಧ ಆಯ್ಕೆಗಳನ್ನು ಹೇಗೆ ಬಳಸುವುದು ಎಂಬುದನ್ನು ಈ ಸಹಾಯ ಆಯ್ಕೆಯ ಅಡಿಯಲ್ಲಿ ಪ್ರದರ್ಶಿಸಲಾಗಿದೆ. ನಿಮಗೆ ಯಾವುದೇ ಆಯ್ಕೆಯ ಬಳಕೆಯ ಬಗ್ಗೆ ಅನುಮಾನವಿದ್ದರೆ ಇದು ಸಹಾಯಕ್ಕೆ ಬರುತ್ತದೆ. ಸಹಾಯದ ಅಡಿಯಲ್ಲಿರುವ ಪ್ರತಿಯೊಂದು ಟ್ಯಾಬ್ ಅನ್ನು ನೀವು ಕ್ಲಿಕ್ ಮಾಡಿದಾಗ, ವೈಶಿಷ್ಟ್ಯಗಳನ್ನು ಬಳಸಲು ಇದು ಮಾರ್ಗದರ್ಶಿ ಚಿತ್ರಗಳೊಂದಿಗೆ ಪ್ರತಿ ಹಂತವನ್ನು ತೋರಿಸುತ್ತದೆ. ಉದಾ., ನೀವು ಇ-ಕೋರ್ಟ್ಸ್ ಸೇವೆಗಳ ಅಪ್ಲಿಕೇಶನ್ ಸಹಾಯದ ಅಡಿಯಲ್ಲಿ ನನ್ನ ಪ್ರಕರಣಗಳ ಟ್ಯಾಬ್ ಅನ್ನು ಕ್ಲಿಕ್ ಮಾಡಿದರೆ, ಅದು ಸ್ಕ್ರೀನ್‌ಶಾಟ್‌ನಲ್ಲಿ ತೋರಿಸಿರುವಂತೆ ಸಹಾಯ ವಿವರಗಳನ್ನು ತೆರೆಯುತ್ತದೆ. ಇದನ್ನು ಅನುಸರಿಸಿ ವಿವಿಧ ಮೆನುಗಳನ್ನು ಬಳಸಲು ಪ್ರಾರಂಭಿಸಬಹುದು.







***ಇ-ಕೋರ್ಟ್ಸ್ ಸೇವೆಗಳ ಮೊಬೈಲ್ ಅಪ್ಲಿಕೇಶನ್ ಅನ್ನು ಇಂದೇ ಡೌನ್‌ಲೋಡ್ ಮಾಡಿ!***

***ನಿಮ್ಮ ಪ್ರಕರಣ ಸ್ಥಿತಿಯನ್ನು ನಿಮ್ಮ ಕೈಯಲ್ಲಿ (ಸೆಟ್) 24 * 7 ಉಚಿತವಾಗಿ ಪಡೆಯಿರಿ.***

# ಇ-ಕೋರ್ಟ್ಸ್ ಸೇವೆಗಳ ಮೊಬೈಲ್ ಅಪ್ಲಿಕೇಶನ್

## ಭಾರತದ ಉಚ್ಚ ನ್ಯಾಯಾಲಯ / ಜಿಲ್ಲಾ ಹಾಗೂ ತಾಲ್ಲೂಕು ನ್ಯಾಯಾಲಯಗಳಿಗೆ


eCourts India

## ಆಂಡ್ರಾಯ್ಡ್ & ಐಓಎಸ್‌ಗಾಗಿ ಇ-ಕೋರ್ಟ್ಸ್ ಸೇವೆಗಳ ಮೊಬೈಲ್ ಆಪ್

**ಆಂಡ್ರಾಯ್ಡ್ & ಐಓಎಸ್‌ಗಾಗಿ ಇಲ್ಲಿ ಡೌನ್‌ಲೋಡ್ ಮಾಡಿ**

GET IT ON Google Play

Download on the App Store




- ecourt services — ನಿಮ್ಮ ಹ್ಯಾಂಡ್ ಸೆಟ್ ನಲ್ಲಿ 24*7 "ನನ್ನ ಪ್ರಕರಣಗಳ" ಅಡಿಯಲ್ಲಿ ಪ್ರಕರಣದ ಸ್ಥಿತಿ, ವ್ಯಾಜ್ಯ ಪಟ್ಟಿ, ನ್ಯಾಯಾಲಯದ ಆದೇಶ/ತೀರ್ಪು ಪಡೆಯಿರಿ.
- ಪ್ರಕರಣದ ಸಂಪೂರ್ಣ ಇತಿಹಾಸ ಪಡೆಯಿರಿ.
- ಆದೇಶ ಹಾಗೂ ತೀರ್ಪು ವೀಕ್ಷಿಸಿ.
- ನ್ಯಾಯಾಲಯದ ಲೊಕೇಶನ್ ತಿಳಿಯಿರಿ.
- i CNR — ಸಿಐನ್‌ಆರ್ ಸಂಖ್ಯೆಯಿಂದ ಪ್ರಕರಣ ಹುಡುಕಿ. **https://services.ecourts.gov.in** ನಿಂದ ಸಿಐನ್‌ಆರ್ ಸಂಖ್ಯೆ ಪಡೆಯಿರಿ.
- ಕ್ಯೂಆರ್ ಕೋಡ್ ನಿಂದ ಪ್ರಕರಣದ ಸ್ಥಿತಿ ತಿಳಿಯಿರಿ. **https://services.ecourts.gov.in** ನಿಂದ ಕ್ಯೂಆರ್ ಕೋಡ್ ಪಡೆಯಿರಿ.
- Case Status — ಪ್ರಕರಣದ ಸಂಖ್ಯೆ/ದಾಖಲಾತಿ ಸಂಖ್ಯೆ/ಪ್ರ.ವ.ವ. ಸಂಖ್ಯೆ/ಅರ್ಜಿದಾರ ಹಾಗೂ ವಕೀಲರ ಹೆಸರು/ಕಾಯಿದೆ/ಪ್ರಕರಣದ ಪ್ರಕಾರದಿಂದ ಸಂಪೂರ್ಣ ಇತಿಹಾಸ ಪಡೆಯಿರಿ.
- causelist — ವ್ಯಾಜ್ಯ ಪಟ್ಟಿ ಪಡೆಯಿರಿ.
- My Cases — ನಿಮ್ಮ ಪ್ರಕರಣಗಳನ್ನು "ನನ್ನ ಪ್ರಕರಣಗಳ" ಅಡಿಯಲ್ಲಿ ಸಂಗ್ರಹಿಸಿ ಹಾಗೂ ಟ್ರ್ಯಾಕ್ ಮಾಡಿ.
- "ನನ್ನ ಪ್ರಕರಣಗಳ" ಅಡಿಯಲ್ಲಿ "ಇಂದಿನ ಪ್ರಕರಣಗಳ" ಎಚ್ಚರಿಕೆ ಪಡೆಯಿರಿ.
- ಕ್ಯಾಲೆಂಡರ್ ಆಯ್ಕೆ ಪಡೆಯಿರಿ.

**ಡೌನ್‌ಲೋಡ್ ಮಾಡಿ**

ಇ-ಸಮಿತಿ,
ಭಾರತದ ಸರ್ವೋಚ್ಚ ನ್ಯಾಯಾಲಯ

ಇ-ಕೋರ್ಟ್ಸ್ ವೆಬ್‌ಸೈಟ್‌ನಿಂದ ಆಂಡ್ರಾಯ್ಡ್ & ಐಓಎಸ್‌ಗಾಗಿ ಇ-ಕೋರ್ಟ್ಸ್ ಮೊಬೈಲ್ ಆಪ್
**https:/services.ecourts.gov.in**